# ಅಧ್ಯಾಯ 5

# ಸಂಸ್ಥೆಗಳ ಕಾರ್ಯನಿರ್ವಹಣೆ

## ಸ್ಥೂಲ ಸಮೀಕ್ಷೆ

ಪ್ರಜಾಪ್ರಭುತ್ವ ಎಂದರೆ ಕೇವಲ ಜನರು ತಮ್ಮ ಆಳುವವರನ್ನು ಆಯ್ಕೆ ಮಾಡುವುದಲ್ಲ. ಪ್ರಜಾಪ್ರಭುತ್ವದಲ್ಲಿ ಆಳುವವರೂ ಸಹ ಕೆಲವು ನೀತಿ, ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅವರು ಸಂಸ್ಥೆಯ ಜೊತೆಗೆ ಮತ್ತು ಸಂಸ್ಥೆಯ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸಬೇಕು. ಈ ಅಧ್ಯಾಯವು ಪ್ರಜಾಪ್ರಭುತ್ವದಲ್ಲಿನ ಅಂತಹ ಸಂಸ್ಥೆಗಳ ಕಾರ್ಯನಿರ್ವಹಣೆ ಬಗೆಗೆ ಇದೆ. ನಮ್ಮ ದೇಶದಲ್ಲಿ ಪ್ರಮುಖ ನಿರ್ಧಾರಗಳನ್ನು ಯಾವ ರೀತಿಯಲ್ಲಿ ಕೈಗೊಂಡು ಜಾರಿಗೆ ತರಲಾಗುತ್ತದೆ ಎಂಬುದನ್ನು ಅವಲೋಕಿಸುವ ಮೂಲಕ ನಾವು ಇದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಈ ನಿರ್ಧಾರಗಳ ಬಗ್ಗೆ ಉಂಟಾಗುವ ವ್ಯಾಜ್ಯಗಳನ್ನು ಹೇಗೆ ಬಗೆಹರಿಸಲಾಗುವುದು ಎಂಬುದನ್ನೂ ನೋಡುತ್ತೇವೆ. ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮಹತ್ವದ ಪಾತ್ರವಹಿಸುವ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳೆಂಬ ಮೂರು ಸಂಸ್ಥೆಗಳು ಈ ಪ್ರಕ್ರಿಯೆಯಲ್ಲಿ ನಮ್ಮ ಗಮನ ಸೆಳೆಯುತ್ತವೆ.

ನೀವು ಈಗಾಗಲೇ ಕೆಲವೊಂದು ಸಂಸ್ಥೆಗಳ ಬಗ್ಗೆ ಹಿಂದಿನ ಪಾಠಗಳಲ್ಲಿ ಓದಿಕೊಂಡಿದ್ದೀರಿ. ಇಲ್ಲಿ ನಾವು ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ಅವಲೋಕಿಸೋಣ ಮತ್ತು ನಂತರ ಇನ್ನಷ್ಟು ಗಂಭೀರವಾದ ಪ್ರಶ್ನೆಗಳನ್ನು ಕೇಳುವತ್ತ ಚಲಿಸೋಣ. ಪ್ರತಿಯೊಂದು ಸಂಸ್ಥೆಯ ಬಗ್ಗೆಯೂ ನಾವು ಕೇಳಬಯಸುವುದು ಇದು: ಈ ಸಂಸ್ಥೆ ಮಾಡುವ ಕೆಲಸ ಏನು? ಈ ಸಂಸ್ಥೆ ಬೇರೆ ಸಂಸ್ಥೆಗಳ ಜೊತೆ ಯಾವ ಸಂಬಂಧವನ್ನು ಹೊಂದಿದೆ? ಅದರ ಕಾರ್ಯವನ್ನು ಹೆಚ್ಚು ಕಡಮೆ ಪ್ರಜಾತಾಂತ್ರಿಕವಾಗಿಸುವುದು ಏನು? ಎಲ್ಲ ಸಂಸ್ಥೆಗಳು ಒಗ್ಗೂಡಿ ಹೇಗೆ ಸರ್ಕಾರದ ಕೆಲಸವನ್ನು ಮಾಡುತ್ತವೆ ಎಂಬುದನ್ನು ತಿಳಿದುಕೊಳ್ಳುವುದೇ ಇಲ್ಲಿನ ಮೂಲ ಉದ್ದೇಶ. ಹೀಗೆ ಮಾಡುವಾಗ ಕೆಲವೊಮ್ಮೆ ನಾವು ಬೇರೆ ದೇಶಗಳ ಪ್ರಜಾಪ್ರಭುತ್ವಗಳಲ್ಲಿನ ಅದೇ ಮಾದರಿಯ ಸಂಸ್ಥೆಗಳೊಡನೆ ಹೋಲಿಸಿ ನೋಡುತ್ತೇವೆ. ಈ ಅಧ್ಯಾಯದಲ್ಲಿ, ಕೇಂದ್ರ ಸರ್ಕಾರ, ಒಕ್ಕೂಟ ಸರ್ಕಾರ ಅಥವಾ ಕೇವಲ ಭಾರತ ಸರ್ಕಾರ ಎಂದು ಕರೆಯಲಾಗುವ ರಾಷ್ಟ್ರ ಮಟ್ಟದಲ್ಲಿ ಕೆಲಸ ಮಾಡುವ ಸರ್ಕಾರವನ್ನು ನಾವು ಉದಾಹರಣೆಯನ್ನಾಗಿ ತೆಗೆದುಕೊಳ್ಳುತ್ತೇವೆ. ಈ ಅಧ್ಯಾಯವನ್ನು ಓದುವಾಗ ನೀವು ನಿಮ್ಮ ರಾಜ್ಯದಲ್ಲಿನ ಸರ್ಕಾರದ ಕಾರ್ಯನಿರ್ವಹಣೆಯ ಉದಾಹರಣೆಗಳನ್ನು ಎತ್ತಿಕೊಂಡು ಚರ್ಚಿಸಬಹುದು.

## 5.1 ಪ್ರಮುಖ ನೀತಿಯೊಂದರ  ನಿರ್ಧಾರ ಹೇಗೆ ?

### ಒಂದು ಸರ್ಕಾರಿ ಆದೇಶ

1990ರ ಆಗಸ್ಟ್ 13ರಂದು ಭಾರತ ಸರ್ಕಾರ ಒಂದು ಆದೇಶವನ್ನು ಹೊರಡಿಸಿತು. ಅದನ್ನು ಕಚೇರಿ ಜ್ಞಾಪನಾ ಪತ್ರ (ಆಫೀಸ್ ಮೆಮೊರಾಂಡಮ್) ಎಂದು ಕರೆಯಲಾಯಿತು. ಎಲ್ಲಾ ಸರ್ಕಾರಿ ಆದೇಶಗಳಂತೆ ಅದರಲ್ಲೂ ಸಂಖ್ಯೆ ಇದ್ದು ಅದರಿಂದಲೇ ಈ ಆದೇಶವನ್ನು ಗುರುತಿಸಲಾಗುತ್ತದೆ:  ಒ.ಎಮ್. ಸಂಖ್ಯೆ  36012/31/90–ಇಎಸ್‌ಟಿ (SCT(ಎಸ್‌ಸಿಟಿ)), ದಿನಾಂಕ 13.08.1990. ಸಿಬ್ಬಂದಿ, ಸಾರ್ವಜನಿಕ  ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯದಡಿ ಬರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಜಂಟಿ ಕಾರ್ಯದರ್ಶಿ ಈ ಆದೇಶಕ್ಕೆ ಸಹಿ ಹಾಕಿದ್ದರು. ಆದೇಶ ಅತ್ಯಂತ ಚಿಕ್ಕದಾಗಿ ಕೇವಲ ಒಂದು ಪುಟದಲ್ಲಿತ್ತು. ಅದು ನೀವು ಶಾಲೆಯಲ್ಲಿ ನೋಡಿರುವ ಸಾಮಾನ್ಯ ಸುತ್ತೋಲೆ ಅಥವಾ ಸೂಚನೆಯಂತೆ ಇತ್ತು. ಸರ್ಕಾರ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿದಿನ ನೂರಾರು ಆದೇಶಗಳನ್ನು ಹೊರಡಿಸುತ್ತದೆ. ಆದರೆ ಇದು ಅತ್ಯಂತ ಮಹತ್ವದ ವಿಷಯವನ್ನು ಒಳಗೊಂಡಿದ್ದು ಹಲವು ವರ್ಷಗಳ ಕಾಲ ವಿವಾದದ  ಮೂಲವಾಯಿತು.  ಆ ನಿರ್ಧಾರವನ್ನು ಹೇಗೆ ಕೈಗೊಳ್ಳಲಾಯಿತು ಮತ್ತು ಆನಂತರ ಏನಾಯಿತು ಎಂಬುದನ್ನು ನಾವೀಗ ನೋಡೋಣ.

ಈ ಆದೇಶದಲ್ಲಿ ಅತ್ಯಂತ ಪ್ರಮುಖ ನೀತಿ  ನಿರ್ಧಾರವೊಂದನ್ನು ಪ್ರಕಟಿಸಲಾಗಿತ್ತು. ಅದರಲ್ಲಿ ಸರ್ಕಾರದ ಅಧೀನದಲ್ಲಿರುವ ಎಲ್ಲ ಸೇವೆಗಳು ಮತ್ತು ನಾಗರಿಕ ಹುದ್ದೆಗಳ ಖಾಲಿ ಇರುವ ಹುದ್ದೆಗಳಲ್ಲಿ ಶೇಕಡ 27ರಷ್ಟನ್ನು ಸಾಮಾಜಿಕವಾಗಿಯೂ ಶೈಕ್ಷಣಿಕವಾಗಿಯೂ ಹಿಂದುಳಿದ ವರ್ಗ (SEBC(ಎಸ್‌ಇಬಿಸಿ)–Socially and Educationally Backward Classes) ಗಳಿಗೆ ಮೀಸಲಾಗಿದೆ ಎಂದು ಹೇಳಿತ್ತು. ಎಸ್‌ಇಬಿಸಿ ಎಂದರೆ ಸರ್ಕಾರವು ಹಿಂದುಳಿದ ವರ್ಗ ಎಂದು  ಪರಿಗಣಿಸಿದ ಜಾತಿಗಳಿಗೆ ಸೇರಿದ ಜನರು. ಅಲ್ಲಿಯವರೆಗೆ ಉದ್ಯೋಗದಲ್ಲಿ ಮೀಸಲಾತಿ ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಲಭ್ಯವಿತ್ತು. ಇದೀಗ ಮೀಸಲಿಗೆ ಮೂರನೇ ಹೊಸ ಪ್ರವರ್ಗ  ಎಸ್‌ಇಬಿಸಿ ಪರಿಚಯಿಸಲಾಯಿತು. ಉದ್ಯೋಗದಲ್ಲಿ ಶೇಕಡ 27ರಷ್ಟು ಮೀಸಲಿರುವ ಈ  ಕೋಟಾದಲ್ಲಿ  ನೇಮಕಗೊಳ್ಳಲು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳು ಮಾತ್ರ ಅರ್ಹರಾಗಿದ್ದರು. ಈ ಹುದ್ದೆಗಳಿಗೆ  ಇತರೆಯವರು ಅರ್ಜಿ ಸಲ್ಲಿಸುವಂತಿರಲಿಲ್ಲ.

### ನಿರ್ಧಾರ ಕೈಗೊಳ್ಳುವವರು

ಈ ಜ್ಞಾಪನಾ ಪತ್ರವನ್ನು ಹೊರಡಿಸಲು ಯಾರು ನಿರ್ಧರಿಸಿದರು? ಅಂತಹ ಮಹತ್ವದ ನಿರ್ಧಾರವನ್ನು ಆ ಆದೇಶ ಪತ್ರಕ್ಕೆ ಸಹಿ ಹಾಕಿದ ವ್ಯಕ್ತಿಯೊಬ್ಬರೇ ಖಂಡಿತ ಕೈಗೊಂಡಿರಲಾರರು ಎಂಬುದು ಸ್ಪಷ್ಟ. ಆ ಅಧಿಕಾರಿಯು ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವರು ನೀಡಿದ ನಿರ್ದೇಶನಗಳನ್ನು ಜಾರಿಗೊಳಿಸುವ ಆ ಇಲಾಖೆಯ ಅಧಿಕಾರಿಯಾಗಿದ್ದರಷ್ಟೆ. ಇಂತಹ ಪ್ರಮುಖ ನಿರ್ಧಾರ ಕೈಗೊಳ್ಳುವಲ್ಲಿ ನಮ್ಮ

ದೇಶದ ಇತರೆ ಪ್ರಮುಖ ಅಧಿಕಾರಸ್ಥರು ಒಳಗೊಂಡಿರುತ್ತಾರೆ ಎಂಬುದನ್ನು ನಾವು ಊಹಿಸಬಹುದು. ಹಿಂದಿನ ಪಾಠದಲ್ಲಿ ಅಂತಹ ಕೆಲವರ ಬಗ್ಗೆ ನೀವು ಈಗಾಗಲೇ ಓದಿದ್ದೀರಿ. ಅಲ್ಲಿ ನೀವು ಈಗಾಗಲೇ ಓದಿಕೊಂಡಿರುವ ಕೆಲವು ಪ್ರಮುಖಾಂಶಗಳನ್ನು ನೋಡೋಣ:

- ರಾಷ್ಟ್ರಪತಿ ದೇಶದ ಮುಖ್ಯಸ್ಥರು ಮತ್ತು ಅವರೇ ದೇಶದ ಪರಮೋಚ್ಚ ಅಧಿಕೃತ ಅಧಿಕಾರಿ.

- ಪ್ರಧಾನಮಂತ್ರಿ ಸರ್ಕಾರದ ಮುಖ್ಯಸ್ಥರು ಮತ್ತು ವಾಸ್ತವವಾಗಿ ಅವರೇ ಸರ್ಕಾರದ ಎಲ್ಲ ಅಧಿಕಾರವನ್ನು ಚಲಾಯಿಸುತ್ತಾರೆ. ಅವರು ಬಹುತೇಕ ನಿರ್ಧಾರಗಳನ್ನು ಸಚಿವ ಸಂಪುಟದಲ್ಲಿ ಕೈಗೊಳ್ಳುವರು.

- ಸಂಸತ್‌ನಲ್ಲಿ ರಾಷ್ಟ್ರಪತಿ ಹಾಗೂ ಸಂಸತ್ತಿನ ಎರಡು ಸದನಗಳಾದ ಲೋಕಸಭೆ ಮತ್ತು ರಾಜ್ಯಸಭೆ ಒಳಗೊಂಡಿವೆ. ಪ್ರಧಾನಮಂತ್ರಿಯವರು ಲೋಕಸಭಾ ಸದಸ್ಯರಲ್ಲಿ ಬಹುಮತೀಯರ ಬೆಂಬಲವನ್ನು ಹೊಂದಿರಬೇಕು.

ಅಂದರೆ, ಕಚೇರಿ ಜ್ಞಾಪನಾ ಪತ್ರದಲ್ಲಿನ ನಿರ್ಧಾರ ಕೈಗೊಳ್ಳುವಲ್ಲಿ ಈ ಎಲ್ಲರೂ ಭಾಗಿಯಾಗಿದ್ದರೇ? ಎಂಬುದನ್ನು ತಿಳಿಯೋಣ.

ಈ ಕಚೇರಿ ಜ್ಞಾಪನಾ ಪತ್ರ ಅನೇಕ ಘಟನಾವಳಿಯ ಪರಿಣಾಮವಾಗಿ ಹುಟ್ಟಿತು. ಭಾರತ ಸರ್ಕಾರ 1979ರಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಕ ಮಾಡಿತು. ಬಿ.ಪಿ.ಮಂಡಲ್ ಅದರ ಮುಖ್ಯಸ್ಥರಾಗಿದ್ದರು. ಹಾಗಾಗಿ ಅದನ್ನು ಮಂಡಲ್ ಆಯೋಗ ಎಂದೇ ಕರೆಯಲಾಯಿತು. ಭಾರತದಲ್ಲಿನ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗವನ್ನು ಗುರುತಿಸಲು ಮಾನದಂಡವನ್ನು ರೂಪಿಸುವಂತೆಯೂ ಅವರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಶಿಫಾರಸು ಮಾಡುವಂತೆಯೂ ಆಯೋಗವನ್ನು ಕೇಳಲಾಗಿತ್ತು. ಆಯೋಗ 1980ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಅದು ಹಲವು ಶಿಫಾರಸುಗಳನ್ನು ಮಾಡಿತು. ಸಾಮಾಜಿಕವಾಗಿಯೂ ಶೈಕ್ಷಣಿಕವಾಗಿಯೂ ಹಿಂದುಳಿದ ವರ್ಗದವರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇಕಡ 27ರಷ್ಟು ಮೀಸಲು ನಿಗದಿಪಡಿಸಬೇಕು ಎಂಬುದು ಈ ಆಯೋಗವು ಮಾಡಿದ ಹಲವು ಶಿಫಾರಸುಗಳ ಪೈಕಿ ಒಂದು. ಆಯೋಗದ ವರದಿಯ ಮೇಲೂ ಅದರ ಶಿಫಾರಸುಗಳ ಬಗ್ಗೆಯೂ ಸಂಸತ್ತಿನಲ್ಲಿ ಚರ್ಚೆ ನಡೆಯಿತು.

ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕೆಂಬ ಬೇಡಿಕೆಯನ್ನು ಹಲವು ವರ್ಷಗಳ ಕಾಲ ಹಲವು ಸಂಸದರೂ ರಾಜಕೀಯ ಪಕ್ಷಗಳೂ ಮಂಡಿಸುತ್ತಲೇ ಇದ್ದರು. ಈ ಮಧ್ಯೆ 1989ರಲ್ಲಿ ಲೋಕಸಭಾ ಚುನಾವಣೆ ಘೋಷಿಸಲಾಯಿತು. ತನಗೆ ಮತ ಹಾಕಿ ಅಧಿಕಾರ ನೀಡಿದರೆ ತಾನು ಮಂಡಲ್ ಆಯೋಗದ ವರದಿಯನ್ನು ಜಾರಿಗೊಳಿಸುತ್ತೇನೆ ಎಂದು ಆಗ ಜನತಾ ದಳ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿತು. ಈ ಚುನಾವಣೆಯಲ್ಲಿ ಜನತಾದಳ ಗೆಲುವು ಪಡೆದು ಸರ್ಕಾರವನ್ನು ರಚಿಸಿತು. ಅದರ ನಾಯಕ ವಿ.ಪಿ. ಸಿಂಗ್ ಪ್ರಧಾನಮಂತ್ರಿಯಾದರು.

ಆನಂತರ ಹಲವು ಬೆಳವಣಿಗೆಗಳು ನಡೆದವು:

- ಭಾರತದ ರಾಷ್ಟ್ರಪತಿಗಳು ಸಂಸತ್ತನ್ನುದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಸರ್ಕಾರದ ಉದ್ದೇಶವನ್ನು ಪ್ರಕಟಿಸಿದರು.

- ಮಂಡಲ್ ಶಿಫಾರಸುಗಳ ಜಾರಿಗೆ 1990ರ ಆಗಸ್ಟ್ 6ರಂದು ಕೇಂದ್ರ ಸಚಿವ ಸಂಪುಟ ಅಧಿಕೃತ ನಿರ್ಧಾರ ಕೈಗೊಂಡಿತು.

- ಮರುದಿನವೇ ಪ್ರಧಾನಮಂತ್ರಿ ವಿ.ಪಿ.ಸಿಂಗ್ ಸಂಸತ್ತಿನ ಉಭಯ ಸದನಗಳಲ್ಲಿ ಒಂದು ಹೇಳಿಕೆ ನೀಡುವುದರ ಮೂಲಕ ಈ ನಿರ್ಧಾರವನ್ನು ತಿಳಿಸಿದರು.

- ಸಚಿವ ಸಂಪುಟದ ನಿರ್ಧಾರವನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಕಳುಹಿಸಿಕೊಡಲಾಯಿತು. ಇಲಾಖೆಯ ಹಿರಿಯ ಅಧಿಕಾರಿಗಳು ಸಚಿವ ಸಂಪುಟದ ನಿರ್ಣಯದಂತೆ ಕರಡು ಆದೇಶವನ್ನು ಸಿದ್ಧಪಡಿಸಿ ಅದಕ್ಕೆ ಸಚಿವರ ಒಪ್ಪಿಗೆ ಪಡೆದರು. ಕೇಂದ್ರ ಸರ್ಕಾರದ ಪರವಾಗಿ ಆದೇಶಕ್ಕೆ ಅಧಿಕಾರಿ ಸಹಿ ಮಾಡಿದರು. ಈ ಮೂಲಕ 1990ರ ಆಗಸ್ಟ್ 13ರಂದು ಆದೇಶ ಒ.ಎಂ. ಸಂಖ್ಯೆ 36012/31/90 ಜನ್ಮ ತಳೆಯಿತು.

ಮುಂದಿನ ಕೆಲವು ತಿಂಗಳುಗಳ ಕಾಲ ಈ ವಿಷಯದ ಬಗ್ಗೆ ದೇಶಾದ್ಯಂತ ಬಿಸಿ ಬಿಸಿ ಚರ್ಚೆಗಳು ನಡೆದವು. ದಿನಪತ್ರಿಕೆಗಳು ಮತ್ತು ವಾರಪತ್ರಿಕೆಗಳಲ್ಲಿ ಇದೇ ವಿಷಯದ ಬಗ್ಗೆ ನಾನಾ ಅಭಿಪ್ರಾಯಗಳು, ದೃಷ್ಟಿಕೋನಗಳು ಬರುತ್ತಿದ್ದವು. ಇದು ಪ್ರತಿಭಟನೆ ಮತ್ತು ಪ್ರತಿರೋಧಕಗಳಿಗೆ ಕಾರಣವಾಗಿ ಕೆಲವೆಡೆ ಹಿಂಸಾಚಾರಕ್ಕೂ ತಿರುಗಿದವು. ಈ ನೀತಿ ನಿರ್ಧಾರದಿಂದ ಉದ್ಯೋಗಾವಕಾಶ ಕಡಿಮೆಯಾಗುವುದರಿಂದ ಜನರು ತೀವ್ರವಾಗಿ ಪ್ರತಿಭಟಿಸಿದರು. ಭಾರತದಲ್ಲಿ ನಾನಾ ಜಾತಿಗಳ ನಡುವೆ ಅಸಮಾನತೆ ಇರುವ ಕಾರಣದಿಂದ ಉದ್ಯೋಗದಲ್ಲಿ ಮೀಸಲಾತಿಯ ಅಗತ್ಯವಿದೆ ಎಂದು ಕೆಲವರು ಭಾವಿಸಿದರು. ಸರ್ಕಾರಿ ಉದ್ಯೋಗಗಳಲ್ಲಿ ಈವರೆಗೆ ಸೂಕ್ತ ಪ್ರಾತಿನಿಧ್ಯ ಸಿಗದೇ ಇದ್ದಂತಹ ಸಮುದಾಯಗಳಿಗೆ ಈ ನಿರ್ಧಾರ ನ್ಯಾಯಯುತ ಅವಕಾಶ ಕಲ್ಪಿಸುತ್ತದೆ ಎಂಬುದು ಅವರ ವಾದವಾಗಿತ್ತು.

ಇದು ಅನ್ಯಾಯದ ಕ್ರಮವಾಗಿದ್ದು ಹಿಂದುಳಿದ ಜಾತಿಗಳಿಗೆ ಸೇರದೇ ಇರುವವರಿಗೆ ಸಮಾನಾವಕಾಶವನ್ನು ತಪ್ಪಿಸುತ್ತದೆ ಎಂದು ಇತರರು ವಾದಿಸಿದರು. ಈ ಸಮುದಾಯಗಳವರು ಹೆಚ್ಚು ಅರ್ಹತೆಗಳನ್ನು ಪಡೆದರೂ ಅವರಿಗೆ ಉದ್ಯೋಗಾವಕಾಶ ಇಲ್ಲವಾಗುತ್ತದೆ ಎಂಬುದು ಅವರ ವಾದವಾಗಿತ್ತು. ಈ ಕ್ರಮ ಜಾತಿ ಭಾವನೆಯನ್ನು ಸದಾಕಾಲ ಜೀವಂತ ಇರಿಸುವ ಮೂಲಕ ರಾಷ್ಟ್ರದ ಏಕತೆಗೆ ಭಂಗ ಉಂಟು ಮಾಡುವುದೆಂಬುದು ಕೆಲವರ ಅಭಿಪ್ರಾಯವಾಗಿತ್ತು. ಈ ಅಧ್ಯಾಯದಲ್ಲಿ ನಾವು ಈ ನಿರ್ಧಾರ ಒಳ್ಳೆಯದೋ ಕೆಟ್ಟದ್ದೋ ಎಂದು ಚರ್ಚೆ ಮಾಡುವುದಿಲ್ಲ. ದೇಶದಲ್ಲಿ ಹೇಗೆ ಪ್ರಮುಖ ನಿರ್ಧಾರಗಳನ್ನು ಕೈಗೊಂಡು ಜಾರಿಗೊಳಿಸಲಾಗುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳುವ ಕಾರಣಕ್ಕಾಗಿ ಮಾತ್ರವೇ ಈ ಉದಾಹರಣೆಯನ್ನು ತೆಗೆದುಕೊಳ್ಳಲಾಗಿದೆ.

ಈ ವಿವಾದವನ್ನು ಬಗೆಹರಿಸಿದವರು ಯಾರು? ಸರ್ಕಾರದ ನಿರ್ಧಾರಗಳಿಂದ ಉದ್ಭವಿಸುವ ವ್ಯಾಜ್ಯಗಳನ್ನು ಭಾರತದಲ್ಲಿ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳು ಇತ್ಯರ್ಥಪಡಿಸುತ್ತವೆ ಎಂಬುದು ನಿಮಗೆ ತಿಳಿದಿದೆ. ಈ ಆದೇಶಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳು ನ್ಯಾಯಾಲಯಗಳಲ್ಲಿ ಹಲವಾರು ದಾವೆಗಳನ್ನು ಹೂಡಿದರು. ಈ ಆದೇಶವನ್ನು ಅನೂರ್ಜಿತಗೊಳಿಸಿ ಜಾರಿಯನ್ನು ತಡೆಹಿಡಿಯಬೇಕು ಎಂದು ಅವರೆಲ್ಲ ನ್ಯಾಯಾಲಯಗಳನ್ನು ಕೋರಿದರು. ಭಾರತದ ಸರ್ವೋಚ್ಚ ನ್ಯಾಯಾಲಯ ಈ ಎಲ್ಲ ದಾವೆಗಳನ್ನು ಒಗ್ಗೂಡಿಸಿತು. ಈ ದಾವೆಯು 'ಇಂದಿರಾ ಸಾಹ್ನಿ (Indira Sawhney) ಮತ್ತು ಇತರರು ವರ್ಸಸ್ ಕೇಂದ್ರ ಸರ್ಕಾರ' ಎಂದು ಹೆಸರಾಗಿದೆ. ಸುಪ್ರೀಂಕೋರ್ಟ್‌ನ ಹನ್ನೊಂದು ನ್ಯಾಯಮೂರ್ತಿಗಳು ಎರಡೂ ಕಡೆ ವಾದಗಳನ್ನು ಆಲಿಸಿದರು. ಸುಪ್ರೀಂಕೋರ್ಟ್‌ನ ಬಹುಮತೀಯ ನ್ಯಾಯಮೂರ್ತಿಗಳು 1992ರಲ್ಲಿ ಭಾರತ ಸರ್ಕಾರದ ಆದೇಶ ಮಾನ್ಯವೆಂದು ಘೋಷಿಸಿದರು. ಅದೇ ವೇಳೆ ಸುಪ್ರೀಂಕೋರ್ಟ್ ಸರಕಾರವು ತನ್ನ ಮೂಲ ಆದೇಶವನ್ನು ಮಾರ್ಪಾಡು ಮಾಡಲು ಆದೇಶಿಸಿತು. ಹಿಂದುಳಿದ ವರ್ಗಗಳಲ್ಲಿನ ಶ್ರೀಮಂತರನ್ನು ಮೀಸಲು ಪ್ರಯೋಜನದಿಂದ ದೂರವಿಡಬೇಕು ಎಂದು ಹೇಳಿತು. ಅದರಂತೆ ಸಿಬ್ಬಂದಿ ಮತ್ತು ತರಬೇತಿ ಇಲಾಖೆ 1993ರ ಸೆಪ್ಟೆಂಬರ್ 8ರಂದು ಇನ್ನೊಂದು ಜ್ಞಾಪನಾ ಪತ್ರವನ್ನು ಹೊರಡಿಸಿತು. ಈ ಮೂಲಕ ವಿವಾದ ಅಂತ್ಯಗೊಂಡಿತು. ಆ ಮೀಸಲು ನೀತಿ ಅಲ್ಲಿಂದೀಚೆಗೆ ಪಾಲನೆಯಾಗುತ್ತಿದೆ.

**ರಾಜಕೀಯ ಸಂಸ್ಥೆಗಳ ಅಗತ್ಯತೆ**

ಸರ್ಕಾರ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ನಾವು ಒಂದು ಉದಾಹರಣೆ ಮೂಲಕ ಈಗ ನೋಡಿದ್ದೇವೆ. ಒಂದು ದೇಶದ ಆಡಳಿತದ ಪ್ರಕ್ರಿಯೆಯಲ್ಲಿ ಅಂತಹ ಹಲವು ಚಟುವಟಿಕೆಗಳು ಒಳಗೊಂಡಿರುತ್ತವೆ. ಉದಾಹರಣೆಗೆ ಜನರಿಗೆ ಭದ್ರತೆಯನ್ನು ಒದಗಿಸುವುದಲ್ಲದೆ ಸಕಲರಿಗೂ ಶಿಕ್ಷಣವನ್ನು ಮತ್ತು ಆರೋಗ್ಯ ಸೇವೆಯನ್ನು ನೀಡಲು ಸೌಲಭ್ಯಗಳನ್ನು ಸೃಷ್ಟಿಸುವುದು ಸರ್ಕಾರದ ಜವಾಬ್ದಾರಿ. ಸರ್ಕಾರ ತೆರಿಗೆಗಳ ಮೂಲಕ ಹಣ ಸಂಗ್ರಹಿಸಿ ಅದನ್ನು ಆಡಳಿತ ನಿರ್ವಹಣೆ, ರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸುತ್ತದೆ. ಸರ್ಕಾರ ಹಲವು ಕಲ್ಯಾಣ ಕಾರ್ಯಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತದೆ. ಈ ಚಟುವಟಿಕೆಗಳನ್ನು ನಡೆಸುವುದು ಹೇಗೆ ಎಂಬುದರ ಬಗ್ಗೆ ಕೆಲವು ವ್ಯಕ್ತಿಗಳು ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಇನ್ನು ಕೆಲವರು ಅವುಗಳನ್ನು ಜಾರಿಗೊಳಿಸಬೇಕಾಗುತ್ತದೆ. ಈ ನಿರ್ಧಾರಗಳಲ್ಲಿ ಅಥವಾ ಅವುಗಳ ಅನುಷ್ಠಾನದಲ್ಲಿ ವ್ಯಾಜ್ಯಗಳು ಏರ್ಪಟ್ಟರೆ ಆಗ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿರ್ಧರಿಸಲು ಓರ್ವ ವ್ಯಕ್ತಿ ಇರಬೇಕಾಗುತ್ತದೆ. ಪ್ರತಿಯೊಬ್ಬರೂ ಯಾರು ಯಾವ ಕೆಲಸ ಮಾಡಬೇಕು ಎಂಬ ಹೊಣೆಗಾರಿಕೆಯನ್ನು ಅರಿತಿರುವುದು ಅತಿ ಮುಖ್ಯ. ಪ್ರಮುಖ ಸ್ಥಾನದಲ್ಲಿರುವ ವ್ಯಕ್ತಿ ಬದಲಾದರೂ ಸಹ ಇಂತಹ ಚಟುವಟಿಕೆಗಳು ನಿಲ್ಲದೆ ನಡೆಯುವುದು ಕೂಡಾ ಅತ್ಯಂತ ಮುಖ್ಯವಾದುದು.

ಈ ಎಲ್ಲ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಎಲ್ಲಾ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲೂ ಹಲವು ಏರ್ಪಾಡುಗಳನ್ನು ಮಾಡಿರಲಾಗಿರುತ್ತದೆ. ಆ ಏರ್ಪಾಡುಗಳನ್ನೇ ಸಂಸ್ಥೆಗಳು ಎಂದು ಕರೆಯಲಾಗುತ್ತದೆ. ಇಂತಹ ಸಂಸ್ಥೆಗಳು ತಮಗೆ ವಹಿಸಿಕೊಡಲಾದ ಕಾರ್ಯಗಳನ್ನು ಮಾಡಿದಾಗ ಆ ಪ್ರಜಾಪ್ರಭುತ್ವವು ಚೆನ್ನಾಗಿ ಕೆಲಸ ಮಾಡುತ್ತದೆ. ಪ್ರತಿಯೊಂದು ಸಂಸ್ಥೆಯ ಅಧಿಕಾರ ಮತ್ತು ಕರ್ತವ್ಯದ ಮುಖ್ಯ

ಮುಖ್ಯ ನಿಯಮಗಳು ಪ್ರತಿಯೊಂದು ದೇಶದ ಸಂವಿಧಾನದಲ್ಲಿಯೂ ಉಲ್ಲೇಖಿಸಲಾಗಿರುತ್ತದೆ. ಅಂತಹ ಹಲವು ಸಂಸ್ಥೆಗಳು ಕಾರ್ಯ ನಿರ್ವಹಿಸುವುದನ್ನು ನಾವು ಮೇಲಿನ ಉದಾಹರಣೆಯಲ್ಲಿ ನೋಡಿದೆವು.

- ಪ್ರಧಾನಮಂತ್ರಿ ಮತ್ತು ಸಚಿವ ಸಂಪುಟ – ಇವು ಎಲ್ಲಾ ಮುಖ್ಯ ನೀತಿ–ನಿರ್ಧಾರಗಳನ್ನು ಕೈಗೊಳ್ಳುವ ಸಂಸ್ಥೆಗಳಾಗಿರುತ್ತವೆ.

- ಎಲ್ಲಾ ನಾಗರಿಕ ಸೇವಾ ಸಿಬ್ಬಂದಿ ಒಗ್ಗೂಡಿ ಕೆಲಸ ಮಾಡಿ, ಸಚಿವರು ಕೈಗೊಂಡ ನಿರ್ಧಾರಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗುತ್ತದೆ.

- ಪ್ರಜೆಗಳು ಮತ್ತು ಸರ್ಕಾರದ ನಡುವೆ ಏರ್ಪಡುವ ವ್ಯಾಜ್ಯಗಳನ್ನು ಅಂತಿಮವಾಗಿ ಇತ್ಯರ್ಥ ಪಡಿಸುವ ಸಂಸ್ಥೆಯೇ ಸುಪ್ರೀಂಕೋರ್ಟ್.

ಈ ಉದಾಹರಣೆಯಲ್ಲಿ ನೀವು ಇತರ ಈ ರೀತಿಯ ಸಂಸ್ಥೆಗಳನ್ನು ಗುರುತಿಸಬಹುದೇ? ಅವುಗಳ ಪಾತ್ರವೇನು?

ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸುವುದು ಸುಲಭದ ಕೆಲಸವಲ್ಲ. ಸಂಸ್ಥೆಗಳಿಗೆ ನೀತಿ ನಿಬಂಧನೆಗಳು ಇರುತ್ತವೆ. ಇವು ನಾಯಕರ ಕೈ ಕಟ್ಟಬಹುದು. ಸಂಸ್ಥೆಗಳಲ್ಲಿ ಸಭೆಗಳು, ಸಮಿತಿಗಳು ಮತ್ತು ದೈನಂದಿನ ಕೆಲಸ ಕಾರ್ಯಗಳಿರುತ್ತವೆ. ಇದರಿಂದಾಗಿ ಆಗಾಗ್ಗೆ ವಿಳಂಬವೂ ಗೊಂದಲಗಳೂ ಸೃಷ್ಟಿಯಾಗುತ್ತವೆ. ಹಾಗಾಗಿ ಸಂಸ್ಥೆಗಳೊಂದಿಗೆ ವ್ಯವಹರಿಸಲು ಕೆಲವೊಮ್ಮೆ ಕಿರಿಕಿರಿ ಆಗಬಹುದು. ಒಬ್ಬನೇ ವ್ಯಕ್ತಿ ಯಾವುದೇ ನಿಯಮ, ಕಾರ್ಯವಿಧಾನ ಮತ್ತು ಸಭೆಗಳು ಇಲ್ಲದೆ ನಿರ್ಧಾರಗಳನ್ನು ಕೈಗೊಳ್ಳುವುದು ಉತ್ತಮ ಎಂದು ಅನಿಸಬಹುದು. ಆದರೆ ಅದು ಪ್ರಜಾಪ್ರಭುತ್ವದ ಅತ್ಯುತ್ಕೃಷ್ಟತೆಯಲ್ಲ. ಸಂಸ್ಥೆಗಳು ಒಡ್ಡುವ ವಿಳಂಬವೂ ಗೊಂದಲಗಳೂ ಕೂಡ ತುಂಬಾ ಉಪಯುಕ್ತವಾಗಿರುತ್ತವೆ. ಅದು ಯಾವುದೇ ನಿರ್ಧಾರದ ಬಗ್ಗೆ ಇನ್ನೊಂದಿಷ್ಟು ಜನರ ಜೊತೆ ಸಮಾಲೋಚಿಸುವ ಅವಕಾಶವನ್ನು ಒದಗಿಸುತ್ತದೆ. ಸಂಸ್ಥೆಗಳು ಒಳ್ಳೆಯ ನಿರ್ಧಾರಗಳನ್ನು ಅತ್ಯಂತ ತ್ವರಿತವಾಗಿ ಕೈಗೊಳ್ಳುವುದನ್ನು ಕಷ್ಟವಾಗಿಸುತ್ತದೆ. ಅದೇ ವೇಳೆ ಕೆಟ್ಟ ನಿರ್ಧಾರಗಳನ್ನೂ ತರಾತುರಿಯಿಂದ ಕೈಗೊಳ್ಳದೇ ಇರುವಂತೆ ಈ ವ್ಯವಸ್ಥೆ ನೋಡಿಕೊಳ್ಳುತ್ತದೆ. ಅದೇ ಕಾರಣಕ್ಕಾಗಿ ಸಂಸ್ಥೆಗಳು ಇರಬೇಕೆಂದು ಪ್ರಜಾಪ್ರಭುತ್ವ ಸರ್ಕಾರಗಳು ಒತ್ತಾಯಿಸುತ್ತವೆ.

## 5.2 ಸಂಸತ್

ಕಚೇರಿ ಜ್ಞಾಪನಾ ಪತ್ರದ ಉದಾಹರಣೆಯಲ್ಲಿ ಸಂಸತ್ತಿನ ಪಾತ್ರ ಏನು ಎಂದು ನೆನಪಿದೆಯೆ? ಬಹುಶಃ ಇಲ್ಲ. ಈ ನಿರ್ಧಾರವನ್ನು ಕೈಗೊಂಡಿದ್ದು ಸಂಸತ್ ಅಲ್ಲವಾದ ಕಾರಣ ಇದರಲ್ಲಿ ಸಂಸತ್ತಿನ ಪಾತ್ರವಿಲ್ಲ ಎಂದು ನೀವು ಅಂದುಕೊಳ್ಳಬಹುದು. ಈಗ ನಾವು ಇನ್ನೊಮ್ಮೆ ಈ ಪ್ರಸಂಗವನ್ನು ಅವಲೋಕಿಸೋಣ, ಅದರಲ್ಲಿ ಸಂಸತ್ತಿನ ಪಾತ್ರವೇನಾದರೂ ಇದೆಯೇ ಎಂಬುದನ್ನು ನೋಡೋಣ. ಈ ಕೆಳಗಿನ ವಾಕ್ಯಗಳನ್ನು ಪೂರ್ತಿಗೊಳಿಸುವ ಮೂಲಕ ಹಿಂದಿನ ಎಲ್ಲ ಪ್ರಮುಖ ವಿಚಾರಗಳನ್ನು ಮತ್ತೆ ನೆನಪು ಮಾಡಿಕೊಳ್ಳೋಣ:

- ಮಂಡಲ್ ಆಯೋಗದ ವರದಿ ಕುರಿತು ----- ಚರ್ಚಿಸಲಾಯಿತು
- ಭಾರತದ ರಾಷ್ಟ್ರಪತಿಗಳು ಇದನ್ನು ತಮ್ಮ ----- ಉಲ್ಲೇಖಿಸಿದರು
- ಪ್ರಧಾನಮಂತ್ರಿಗಳು ------ ನೀಡಿದರು.

ಈ ನಿರ್ಧಾರವನ್ನು ಸಂಸತ್ತು ನೇರವಾಗಿ ಕೈಗೊಳ್ಳಲಿಲ್ಲ, ಆದರೆ ವರದಿ ಮೇಲಿನ ಸಂಸದೀಯ ಚರ್ಚೆಯ ಪ್ರಭಾವದಿಂದಾಗಿ ಸರ್ಕಾರದ ನಿರ್ಧಾರ ರೂಪುಗೊಂಡಿತು. ಸಂಸತ್ತು ಮಂಡಲ್ ಶಿಫಾರಸ್ಸುಗಳ ಮೇಲೆ ಕಾರ್ಯೋನ್ಮುಖವಾಗುವಂತೆ ಸರ್ಕಾರದ ಮೇಲೆ ಒತ್ತಡವನ್ನು ತಂದಿತು. ಸಂಸತ್ ಈ ನಿರ್ಧಾರದ ಪರವಾಗಿ ಇಲ್ಲದಿದ್ದರೆ, ಸರ್ಕಾರವು ಆ ವಿಷಯದಲ್ಲಿ ಮುಂದುವರಿಯಲಾಗುತ್ತಿರಲಿಲ್ಲ. ಏಕೆ ಎಂಬುದನ್ನು ಊಹಿಸಬಲ್ಲಿರಾ? ಹಿಂದಿನ ಪಾಠದಲ್ಲಿ ನೀವು ಸಂಸತ್ತಿನ ಬಗ್ಗೆ ಓದಿರುವುದನ್ನು ನೆನಪು ಮಾಡಿಕೊಳ್ಳಿ. ಸಂಪುಟದ ನಿರ್ಧಾರದ ಬಗ್ಗೆ ಸಂಸತ್ತಿಗೆ ಒಪ್ಪಿಗೆ ಇಲ್ಲದಿದ್ದರೆ ಅದು ಏನು ಮಾಡುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಲು ಪ್ರಯತ್ನಿಸಿ.

**ಸಂಸತ್ತು ನಮಗೆ ಏಕೆ ಬೇಕು?**

ಎಲ್ಲಾ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲೂ ಚುನಾಯಿತ ಪ್ರತಿನಿಧಿಗಳ ಸಭೆ ಜನರ ಪರವಾಗಿ ಪರಮೋಚ್ಚ ರಾಜಕೀಯ ಅಧಿಕಾರವನ್ನು ಚಲಾಯಿಸುತ್ತದೆ. ಭಾರತದಲ್ಲಿ ಅಂತಹ ರಾಷ್ಟ್ರೀಯ ಸಭೆಗೆ ಆಯ್ಕೆಯಾದ ಜನಪ್ರತಿನಿಧಿಗಳನ್ನು ಒಳಗೊಂಡ ಸದನಕ್ಕೆ ಸಂಸತ್ ಎಂದು ಕರೆಯಲಾಗುತ್ತದೆ. ರಾಜ್ಯ ಮಟ್ಟದಲ್ಲಿ ಅದನ್ನು ಶಾಸಕಾಂಗ ಅಥವಾ ವಿಧಾನಸಭೆ ಎಂದು ಕರೆಯಲಾಗುತ್ತದೆ. ಈ ಹೆಸರು ದೇಶದಿಂದ ದೇಶಕ್ಕೆ ಬೇರೆಯಾಗಬಹುದು, ಆದರೆ ಪ್ರತಿಯೊಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಸಹ ಇಂತಹ ಶಾಸನಸಭೆ ಇದ್ದೇ ಇರುತ್ತವೆ. ಅದು ಜನರ ಪರವಾಗಿ ಹಲವು ರೀತಿಯಲ್ಲಿ ರಾಜಕೀಯ ಅಧಿಕಾರವನ್ನು ಚಲಾವಣೆ ಮಾಡುತ್ತದೆ:

1. ಯಾವುದೇ ದೇಶದಲ್ಲಿ ಶಾಸನಗಳನ್ನು ರೂಪಿಸುವ ಅಂತಿಮ ಅಧಿಕಾರ ಸಂಸತ್ತಿಗಿರುತ್ತದೆ. ಈ ಕಾನೂನು ರೂಪಿಸುವುದು ಅಥವಾ ಶಾಸನ ರೂಪಿಸುವ ಕೆಲಸ ಅತ್ಯಂತ ಮಹತ್ವದ್ದು ಮತ್ತು ಆ ಕೆಲಸ ಮಾಡುವ ಶಾಸನಸಭೆಗಳನ್ನು ಶಾಸಕಾಂಗಗಳು ಎಂದು ಕರೆಯಲಾಗುತ್ತವೆ. ವಿಶ್ವದಾದ್ಯಂತ ಸಂಸತ್‌ಗಳು ಹೊಸ ಕಾನೂನುಗಳನ್ನು ರೂಪಿಸಬಹುದು, ಚಾಲ್ತಿಯಲ್ಲಿರುವ ಕಾನೂನುಗಳನ್ನು ಬದಲಾಯಿಸಬಹುದು ಅಥವಾ ಚಾಲ್ತಿಯಲ್ಲಿರುವ ಕಾನೂನುಗಳನ್ನು ರದ್ದುಗೊಳಿಸಬಹುದು ಮತ್ತು ಅವುಗಳ ಜಾಗದಲ್ಲಿ ಹೊಸ ಶಾಸನಗಳನ್ನು ರೂಪಿಸಬಹುದು.
2. ವಿಶ್ವದಾದ್ಯಂತ, ಆಡಳಿತಗಾರರ ಮೇಲೆ ಸಂಸತ್ತು ಕೆಲವು ನಿಯಂತ್ರಣವನ್ನು ಹೊಂದಿರುತ್ತದೆ. ಭಾರತದಂತಹ ಕೆಲವು ದೇಶಗಳಲ್ಲಿ ಈ ನಿಯಂತ್ರಣ ನೇರವೂ ಸಂಪೂರ್ಣವೂ ಆಗಿರುತ್ತದೆ. ಯಾರು ಸರ್ಕಾರವನ್ನು ನಡೆಸುತ್ತಾರೋ ಅವರು ತಮಗೆ ಸಂಸತ್ತಿನ ಬೆಂಬಲ ಇರುವವರೆಗೆ ಮಾತ್ರವೇ ನಿರ್ಧಾರಗಳನ್ನು ಕೈಗೊಳ್ಳುವುದು ಸಾಧ್ಯ.

3. ಸರ್ಕಾರದಲ್ಲಿನ ಎಲ್ಲಾ ಹಣವನ್ನು ಸಂಸತ್‌ಗಳು ನಿಯಂತ್ರಿಸುತ್ತವೆ. ಬಹುತೇಕ ರಾಷ್ಟಗಳಲ್ಲಿ ಸಂಸತ್ತಿನ ಅನುಮೋದನೆಯಿಂದ ಮಾತ್ರವೇ, ಸಾರ್ವಜನಿಕ ಹಣವನ್ನು ವಿನಿಯೋಗಿಸಲು ಸಾಧ್ಯ.

4. ಯಾವುದೇ ದೇಶದಲ್ಲಿ ರಾಷ್ಟ್ರೀಯ ನೀತಿಗಳು ಮತ್ತು ಸಾರ್ವಜನಿಕ ವಿಷಯಗಳ ಬಗ್ಗೆ ಚರ್ಚೆ ಮತ್ತು ಸಂವಾದ ನಡೆಸುವ ಅತ್ಯುನ್ನತ ವೇದಿಕೆಯೇ ಸಂಸತ್. ಸಂಸತ್ ಯಾವುದೇ ವಿಷಯದ ಬಗ್ಗೆ ಬೇಕಾದರೂ ಮಾಹಿತಿಯನ್ನು ಕೇಳಬಹುದು.

**ಸಂಸತ್ತಿನ ಎರಡು ಸದನಗಳು**

ಆಧುನಿಕ ಪ್ರಜಾಪ್ರಭುತ್ವದಲ್ಲಿ ಸಂಸತ್ತು ಅತ್ಯಂತ ಪ್ರಮುಖ ಪಾತ್ರವಹಿಸುವುದರಿಂದ ಬಹುತೇಕ ಎಲ್ಲಾ ದೊಡ್ಡ ರಾಷ್ಟಗಳು ಸಂಸತ್ತಿನ ಪಾತ್ರ ಮತ್ತು ಅಧಿಕಾರಗಳನ್ನು ಎರಡು ಭಾಗಗಳನ್ನಾಗಿ ವಿಭಜಿಸುತ್ತವೆ. ಅವುಗಳನ್ನು ಮಹಾಮಂಡಳಿ (Chambers) ಅಥವಾ ಸದನಗಳು ಎಂದು ಕರೆಯಲಾಗುತ್ತದೆ. ಒಂದು ಸದನ ಸಾಮಾನ್ಯವಾಗಿ ನೇರವಾಗಿ ಜನರಿಂದ ಚುನಾಯಿತದ್ದಾಗಿರುತ್ತದೆ. ಅದು ಜನರ ಪರವಾಗಿ ನೈಜ ಅಧಿಕಾರವನ್ನು ಚಲಾಯಿಸುತ್ತದೆ. ಎರಡನೇ ಸದನ ಸಾಮಾನ್ಯವಾಗಿ ಪರೋಕ್ಷವಾಗಿ ಚುನಾಯಿತಗೊಂಡಿರುತ್ತದೆ. ಅದು ಕೆಲವು ವಿಶೇಷ ಕಾರ್ಯಗಳನ್ನು ನಿರ್ವಹಿಸುತ್ತದೆ. ಎರಡನೇ ಸದನದ ಅತ್ಯಂತ ಸಾಮಾನ್ಯ ಕೆಲಸವೆಂದರೆ ನಾನಾ ರಾಜ್ಯಗಳು, ಪ್ರದೇಶಗಳು ಅಥವಾ ಒಕ್ಕೂಟದ ಘಟಕಗಳ ಹಿತಾಸಕ್ತಿಗಳನ್ನು ನೋಡಿಕೊಳ್ಳುವುದು.

ನಮ್ಮ ದೇಶದಲ್ಲಿ ಸಂಸತ್ತು ಎರಡು ಸದನಗಳನ್ನು ಒಳಗೊಂಡಿದೆ. ಈ ಎರಡು ಸದನಗಳನ್ನು Council of States (ಕೌನ್ಸಿಲ್ ಆಫ್ ಸ್ಟೇಟ್ಸ್) (ರಾಜ್ಯಸಭಾ) ಮತ್ತು House of the People (ಹೌಸ್ ಆಫ್ ದಿ ಪೀಪಲ್) (ಲೋಕಸಭಾ) ಎಂದು ಕರೆಯಲಾಗುತ್ತದೆ. ಭಾರತದ ರಾಷ್ಟಪತಿಗಳು ಸಂಸತ್ತಿನ ಅಂಗವಾಗಿದ್ದರೂ ಅವರು (ಆಕೆಯು) ಎರಡೂ ಸದನದ ಸದಸ್ಯರಲ್ಲ. ಆದ್ದರಿಂದ ಎರಡೂ ಸದನಗಳು ಅಂಗೀಕರಿಸಿದ ಎಲ್ಲ ಕಾನೂನುಗಳು ರಾಷ್ಟಪತಿಗಳ ಸಹಿ ಪಡೆದ ನಂತರವೇ ಅಧಿಕೃತವಾಗಿ ಜಾರಿಗೊಳ್ಳುವುದು.

ಭಾರತೀಯ ಸಂಸತ್ತಿನ ಬಗ್ಗೆ ಈ ಹಿಂದಿನ ಪಾಠಗಳಲ್ಲಿ ನೀವು ಓದಿದ್ದೀರಿ. ಲೋಕಸಭಾ ಚುನಾವಣೆ ಹೇಗೆ ನಡೆಯುತ್ತದೆ ಎಂಬುದನ್ನು ನೀವು ನಾಲ್ಕನೇ ಅಧ್ಯಾಯದಲ್ಲಿ ತಿಳಿದುಕೊಂಡಿದ್ದೀರಿ. ಇಲ್ಲಿ ಸಂಸತ್ತಿನ ಎರಡು ಸದನಗಳ ರಚನೆಯ ಕುರಿತಾದ ಪ್ರಮುಖ ವ್ಯತ್ಯಾಸಗಳನ್ನು ಮೆಲುಕು ಹಾಕೋಣ. ಲೋಕಸಭಾ ಮತ್ತು ರಾಜ್ಯಸಭಾ ಕುರಿತಾದ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

- ಒಟ್ಟಾರೆ ಸದಸ್ಯರ ಸಂಖ್ಯೆ ಎಷ್ಟು?
- ಸದಸ್ಯರನ್ನು ಯಾರು ಆಯ್ಕೆ ಮಾಡುತ್ತಾರೆ?
- ಅಧಿಕಾರ ಅವಧಿ ಎಷ್ಟು (ವರ್ಷಗಳಲ್ಲಿ)?
- ಸದನವನ್ನು ವಿಸರ್ಜಿಸಬಹುದೇ ಅಥವಾ ಅದು ಶಾಶ್ವತವೇ?

ಈ ಎರಡು ಸದನಗಳಲ್ಲಿ ಯಾವುದು ಹೆಚ್ಚು ಶಕ್ತಿಶಾಲಿ? ಕೆಲವೊಮ್ಮೆ ರಾಜ್ಯಸಭೆಯನ್ನು 'ಮೇಲ್ಮನೆ' ಎಂದೂ ಲೋಕಸಭೆಯನ್ನು 'ಕೆಳಮನೆ' ಎಂದೂ ಕರೆಯುವುದರಿಂದ ರಾಜ್ಯಸಭೆಗೆ ಹೆಚ್ಚಿನ ಅಧಿಕಾರವಿದೆ ಎಂದು ಅನಿಸಬಹುದು. ಇದರರ್ಥ ರಾಜ್ಯಸಭೆ ಲೋಕಸಭೆಗಿಂತ ಹೆಚ್ಚಿನ ಅಧಿಕಾರ ಹೊಂದಿದೆ ಎಂದಲ್ಲ. ಇದು ಜನರ ಮಾತಿನ ಲೋಕರೂಢಿ ಅಷ್ಟೆ; ಸಂವಿಧಾನದಲ್ಲಿ ಈ ಭಾಷೆಯನ್ನು ಬಳಸಿಲ್ಲ.

ನಮ್ಮ ಸಂವಿಧಾನದಲ್ಲಿ ರಾಜ್ಯಗಳ ಕುರಿತಂತೆ ರಾಜ್ಯಸಭೆಗೆ ಕೆಲವೊಂದು ವಿಶೇಷ ಅಧಿಕಾರಗಳನ್ನು ನೀಡಲಾಗಿದೆ. ಆದರೆ, ಬಹುತೇಕ ವಿಷಯಗಳಲ್ಲಿ ಲೋಕಸಭೆಯೇ ಪರಮೋಚ್ಚ ಅಧಿಕಾರವನ್ನು ಚಲಾಯಿಸುತ್ತದೆ. ಅದು ಹೇಗೆ ಎಂಬುದನ್ನು ನೋಡೋಣ:

1. ಯಾವುದೇ ಸಾಮಾನ್ಯ ಶಾಸನವನ್ನು ಎರಡೂ ಸದನಗಳು ಅಂಗೀಕರಿಸಬೇಕು. ಆದರೆ ಎರಡೂ ಸದನಗಳ ನಡುವೆ ಭಿನ್ನಾಭಿಪ್ರಾಯ ಏರ್ಪಟ್ಟಾಗ ಅಂತಿಮ ನಿರ್ಣಯವನ್ನು ಜಂಟಿ ಅಧಿವೇಶನದಲ್ಲಿ ಎರಡೂ ಸದನಗಳ ಸದಸ್ಯರು ಒಟ್ಟಿಗೆ ಕುಳಿತು ನಿರ್ಧಾರ ಕೈಗೊಳ್ಳುತ್ತದೆ. ಅಂತಹ ಸಭೆಗಳಲ್ಲಿ, ಲೋಕಸಭೆಯಲ್ಲಿ ಸಹಜವಾಗಿಯೇ ಸಂಖ್ಯಾಬಲ ಜಾಸ್ತಿ ಇರುವುದರಿಂದ ಅದರ ಅಭಿಪ್ರಾಯವೇ ಪರಿಗಣನೆಗೆ ಬರುವ ಸಾಧ್ಯತೆಗಳು ಹೆಚ್ಚಿರುತ್ತವೆ.

2. ಹಣಕಾಸು ವಿಷಯಗಳ ತೀರ್ಮಾನಕ್ಕೆ ಲೋಕಸಭೆಗೆ ಹೆಚ್ಚಿನ ಅಧಿಕಾರ ಇದೆ. ಒಮ್ಮೆ ಲೋಕಸಭೆ ಸರ್ಕಾರದ ಬಜೆಟ್ ಅನ್ನು ಅಥವಾ ಹಣಕಾಸು ಸಂಬಂಧಿತ ಯಾವುದೇ ವಿಧೇಯಕವನ್ನು ಅಂಗೀಕರಿಸಿದರೆ ರಾಜ್ಯಸಭೆ ಅದನ್ನು ತಿರಸ್ಕರಿಸುವಂತಿಲ್ಲ. ಅಂತಹ ಯಾವುದೇ ವಿಧೇಯಕವನ್ನು ರಾಜ್ಯಸಭೆ 14 ದಿನಗಳ ಕಾಲ ತಡೆಹಿಡಿಯಬಹುದು, ಅಥವಾ ಅದರಲ್ಲಿ ಏನಾದರೂ ಬದಲಾವಣೆಗಳನ್ನು ಸೂಚಿಸಬಹುದು. ಲೋಕಸಭೆ ಅಂತಹ ಬದಲಾವಣೆಗಳನ್ನು ಒಪ್ಪಿಕೊಳ್ಳಬಹುದು ಅಥವಾ ಒಪ್ಪದೇ ಇರಬಹುದು.

3. ಪ್ರಮುಖವಾಗಿ, ಲೋಕಸಭೆ ಸಚಿವ ಮಂಡಳಿಯನ್ನು ನಿಯಂತ್ರಿಸುತ್ತದೆ. ಲೋಕಸಭೆಯಲ್ಲಿ ಬಹುಮತದ ಬೆಂಬಲವಿರುವ ವ್ಯಕ್ತಿಯನ್ನು ಮಾತ್ರವೇ ಪ್ರಧಾನಮಂತ್ರಿಯನ್ನಾಗಿ ನೇಮಿಸಲಾಗುವುದು. ಲೋಕಸಭೆಯ ಬಹುಮತೀಯ ಸದಸ್ಯರು ಸಚಿವ ಮಂಡಳಿಯಲ್ಲಿ (Council of Ministers) 'ವಿಶ್ವಾಸಇಲ್ಲ' ಎಂದು ಹೇಳಿದರೆ ಆಗ ಪ್ರಧಾನಮಂತ್ರಿಯೂ ಸೇರಿದಂತೆ ಇಡೀ ಸಚಿವ ಮಂಡಳಿ ರಾಜೀನಾಮೆ ನೀಡಬೇಕಾಗುತ್ತದೆ. ರಾಜ್ಯಸಭೆಗೆ ಇಂತಹ ಅಧಿಕಾರ ಇಲ್ಲ.

## 5.3 ರಾಜಕೀಯ ಕಾರ್ಯಾಂಗ

ಈ ಅಧ್ಯಾಯದ ಆರಂಭದಲ್ಲಿ ನಾವು ಕಚೇರಿ ಜ್ಞಾಪನಾ ಪತ್ರದ ವಿಚಾರ ಚರ್ಚಿಸಿದ್ದು ನೆನಪಿದೆಯೇ? ದಾಖಲೆಗೆ ಸಹಿ ಹಾಕುವ ವ್ಯಕ್ತಿ ಆ ನಿರ್ಧಾರಗಳನ್ನು ಕೈಗೊಂಡಿರುವುದಿಲ್ಲ ಎಂಬುದನ್ನು ಕಂಡುಕೊಂಡಿದ್ದೇವೆ. ಆತ ಕೇವಲ ಬೇರೊಬ್ಬ ವ್ಯಕ್ತಿ ಕೈಗೊಂಡ ನೀತಿಯ ನಿರ್ಧಾರವನ್ನು ಕಾರ್ಯಗತಗೊಳಿಸಿದನು. ಆ ನಿರ್ಧಾರವನ್ನು ಕೈಗೊಳ್ಳುವಲ್ಲಿ ಪ್ರಧಾನಮಂತ್ರಿಗಳ ಪಾತ್ರವನ್ನು ನಾವು ಗಮನಿಸಿದ್ದೇವೆ. ಅಲ್ಲದೆ ಲೋಕಸಭೆಯ

ಬೆಂಬಲವಿಲ್ಲದೆ, ಅವರೂ ಕೂಡ ಆ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಿರಲಿಲ್ಲ ಎಂಬುದನ್ನೂ ತಿಳಿದಿದ್ದೇವೆ. ಆ ಅರ್ಥದಲ್ಲಿ, ಅವರು ಕೇವಲ ಸಂಸತ್ತಿನ ಇಚ್ಛೆಯನ್ನು ಜಾರಿಗೊಳಿಸುತ್ತಿದ್ದರು.

ಹಾಗಾಗಿ, ಪ್ರತಿದಿನ ನಿರ್ಧಾರಗಳನ್ನು ಕೈಗೊಳ್ಳುವ ಹಲವು ಅಧಿಕಾರಿಗಳನ್ನು ಸರ್ಕಾರದ ನಾನಾ ಹಂತಗಳಲ್ಲಿ ಕಾಣುತ್ತೇವೆ. ಆದರೆ ಅವರು ಜನರ ಪರವಾಗಿ ಯಾವುದೇ ಪರಮೋಚ್ಚ ಅಧಿಕಾರವನ್ನು ಚಲಾಯಿಸುವುದಿಲ್ಲ. ಈ ಎಲ್ಲ ಅಧಿಕಾರಿಗಳನ್ನು ಸಾಮೂಹಿಕವಾಗಿ ಕಾರ್ಯಾಂಗ (executive (ಎಕ್ಸಿಕ್ಯೂಟಿವ್)) ಎಂದು ಕರೆಯುತ್ತೇವೆ. ಅವರು ಸರ್ಕಾರದ ನೀತಿಗಳನ್ನು 'ಕಾರ್ಯರೂಪ'ಕ್ಕೆ ತರುವವರಾದ ಪ್ರಯುಕ್ತ ಅವರನ್ನು ಕಾರ್ಯಾಂಗದವರು ಎಂದು ಕರೆಯಲಾಗುತ್ತದೆ. ಹಾಗಾಗಿ ನಾವು 'ಸರ್ಕಾರ'ದ ಬಗ್ಗೆ ಮಾತನಾಡುವಾಗ ಸಾಮಾನ್ಯವಾಗಿ ಕಾರ್ಯಾಂಗವನ್ನು ಉದ್ದೇಶಿಸಿಯೇ ಹೇಳುತ್ತೇವೆ.

**ರಾಜಕೀಯ ಮತ್ತು ಕಾಯಂ ಕಾರ್ಯಾಂಗ**

ಪ್ರಜಾಪ್ರಭುತ್ವ ದೇಶದಲ್ಲಿ ಎರಡು ವರ್ಗದ ಅಧಿಕಾರಸ್ಥರು ಕಾರ್ಯಾಂಗದಲ್ಲಿರುತ್ತಾರೆ. ಒಂದನೇ ವರ್ಗ ನಿಗದಿತ ಅವಧಿಗೆ ಜನರಿಂದ ಆಯ್ಕೆಯಾಗಿರುವ ವ್ಯಕ್ತಿಗಳು. ಅವರನ್ನು ರಾಜಕೀಯ ಕಾರ್ಯಾಂಗ ಎಂದು ಕರೆಯಲಾಗುವುದು. ದೊಡ್ಡ ನಿರ್ಧಾರಗಳನ್ನು ಕೈಗೊಳ್ಳುವ ರಾಜಕೀಯ ನಾಯಕರು ಈ ವರ್ಗಕ್ಕೆ ಸೇರುತ್ತಾರೆ. ಎರಡನೇ ವರ್ಗದಲ್ಲಿ, ದೀರ್ಘಕಾಲದ ಆಧಾರದಲ್ಲಿ ನೇಮಕಗೊಂಡಿರುವ ವ್ಯಕ್ತಿಗಳು. ಅವರನ್ನು ಕಾಯಂಕಾರ್ಯಾಂಗ ಅಥವಾ ನಾಗರಿಕ ಸೇವೆಗಳು ಎಂದು ಕರೆಯಲಾಗುವುದು. ನಾಗರಿಕ ಸೇವೆಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳನ್ನು ನಾಗರಿಕ ಸೇವಾ ಅಧಿಕಾರಿಗಳು ಎಂದು ಕರೆಯಲಾಗುವುದು. ಆಡಳಿತ ಪಕ್ಷ ಬದಲಾದರೂ ಸಹ ಅವರು ಸೇವೆಯಲ್ಲಿದ್ದು ಕಾರ್ಯ ನಿರ್ವಹಿಸುತ್ತಾರೆ. ಈ ಅಧಿಕಾರಿಗಳು ರಾಜಕೀಯ ಕಾರ್ಯಾಂಗದ ಅಧೀನ ಕೆಲಸ ಮಾಡುತ್ತಾ ದೈನಂದಿನ ಆಡಳಿತವನ್ನು ನಿರ್ವಹಿಸಲು ಅವರಿಗೆ ಸಹಾಯ ಮಾಡುತ್ತಾರೆ. ಕಚೇರಿ ಜ್ಞಾಪನಾಪತ್ರದ ವಿಚಾರದಲ್ಲಿ ರಾಜಕೀಯ ಮತ್ತು ರಾಜಕೀಯೇತರ ಕಾರ್ಯಾಂಗದವರ ಪಾತ್ರಗಳು ನೆನಪಿದೆಯೇ?

ನೀವು ಕೇಳಬಹುದು: ರಾಜಕೀಯೇತರ ಕಾರ್ಯಾಂಗಕ್ಕಿಂತ ರಾಜಕೀಯ ಕಾರ್ಯಾಂಗಕ್ಕೆ ಏಕೆ ಹೆಚ್ಚು ಅಧಿಕಾರವಿದೆ? ನಾಗರಿಕ ಸೇವಾ ಅಧಿಕಾರಿಗಿಂತ ಸಚಿವರು ಏಕೆ ಹೆಚ್ಚು ಶಕ್ತಿಶಾಲಿ? ಸಾಮಾನ್ಯವಾಗಿ ನಾಗರಿಕ ಸೇವಾ ಅಧಿಕಾರಿ ಹೆಚ್ಚು ವಿದ್ಯಾವಂತರಾಗಿದ್ದು, ಅವರಿಗೆ ನಿಗದಿತ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನವಿರುತ್ತದೆ. ಹಣಕಾಸು ಸಚಿವಾಲಯದಲ್ಲಿನ ಸಲಹೆಗಾರರು ಆರ್ಥಿಕತೆಯ ಬಗ್ಗೆ ಹಣಕಾಸು ಸಚಿವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತಿಳಿದುಕೊಂಡಿರುತ್ತಾರೆ. ಕೆಲವೊಮ್ಮೆ ಸಚಿವರಿಗೆ ತಮ್ಮ ಅಧೀನಕ್ಕೊಳಪಡುವ ಸಚಿವಾಲಯದ ತಾಂತ್ರಿಕ ವಿಚಾರಗಳ ಬಗ್ಗೆ ಅಲ್ಪ ಸ್ವಲ್ಪವಷ್ಟೇ ತಿಳಿದಿರುತ್ತದೆ. ಇದು ರಕ್ಷಣೆ, ಕೈಗಾರಿಕೆ, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಗಣಿಗಾರಿಕೆ ಮತ್ತಿತರ ಸಚಿವಾಲಯಗಳಲ್ಲಿ ಸಾಮಾನ್ಯವಾಗಿ ಘಟಿಸುತ್ತದೆ. ಈ ವಿಷಯಗಳಲ್ಲಿ ಸಚಿವರೇ ಏಕೆ ಅಂತಿಮ ನಿರ್ಧಾರಗಳನ್ನು ಕೈಗೊಳ್ಳಬೇಕು?

ಕಾರಣ ಅತ್ಯಂತ ಸರಳ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಇಚ್ಛೆಯೇ ಪರಮೋಚ್ಚವಾದುದು. ಸಚಿವರು ಜನರಿಂದ ಆಯ್ಕೆಯಾಗಿರುತ್ತಾರೆ ಮತ್ತು ಆದ್ದರಿಂದ ಜನರ ಇಚ್ಛೆಯ ಅನುಸಾರವಾಗಿ ಮತ್ತು ಅವರ ಪರವಾಗಿ ಅಧಿಕಾರವನ್ನು ಚಲಾಯಿಸುವ ಶಕ್ತಿಯನ್ನು ಸಚಿವರು ಹೊಂದಿರುತ್ತಾರೆ. ಆಕೆ ಅಂತಿಮವಾಗಿ ತನ್ನ

ನಿರ್ಧಾರಗಳ ಪರಿಣಾಮಗಳ ಬಗ್ಗೆ ಜನರಿಗೆ ಉತ್ತರ ನೀಡಬೇಕಾಗುತ್ತದೆ. ಹಾಗಾಗಿ ಸಚಿವರುಗಳೇ ಎಲ್ಲ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವರು. ನೀತಿ ನಿರ್ಧಾರದ ಉದ್ದೇಶವನ್ನೂ ಅದನ್ನು ಕೈಗೊಳ್ಳಬೇಕಾದ ಚೌಕಟ್ಟನ್ನೂ ಸಚಿವರು ತೀರ್ಮಾನಿಸುತ್ತಾರೆ. ಸಚಿವರು ತನ್ನ ಸಚಿವಾಲಯದ ವಿಷಯಗಳ ಬಗ್ಗೆ ಪರಿಣಿತಿ ಹೊಂದಿದ್ದಾರೆ ಅಥವಾ ಹೊಂದಿರಲೇಬೇಕು ಎಂದು ನಿರೀಕ್ಷಿಸುವಂತಿಲ್ಲ. ಎಲ್ಲಾ ತಾಂತ್ರಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸಚಿವರು ತಜ್ಞರಿಂದ ಸಲಹೆಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ ಅನೇಕ ವೇಳೆ ತಜ್ಞರು ಕೂಡ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದೂ ಆಕೆಯ ಮುಂದೆ ಒಂದಕ್ಕಿಂತ ಹೆಚ್ಚು ಆಯ್ಕೆಗಳನ್ನು ಮುಂದಿಡುವುದೂ ನಡೆಯುತ್ತದೆ. ಅಂತಹ ಸಂದರ್ಭಗಳಲ್ಲಿ ಸಚಿವರು ಒಟ್ಟಾರೆ ಉದ್ದೇಶವನ್ನು ಗಮನದಲ್ಲಿ ಇಟ್ಟುಕೊಂಡು ನಿರ್ಧಾರವನ್ನು ಕೈಗೊಳ್ಳುತ್ತಾರೆ.

ವಾಸ್ತವಾಗಿ ಎಲ್ಲಾ ದೊಡ್ಡ ಸಂಸ್ಥೆಯಲ್ಲೂ ಇಂತಹುದು ನಡೆಯುತ್ತದೆ. ಯಾರು ಒಟ್ಟಾರೆ ಚಿತ್ರವನ್ನು ಅರ್ಥ ಮಾಡಿಕೊಂಡಿರುತ್ತಾರೋ ಅವರೇ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತಾರೆಯೇ ಹೊರತು ತಜ್ಞರಲ್ಲ. ತಜ್ಞರು ಮುಂದೆ ಹೋಗಲು ದಾರಿ ತೋರಬಹುದು, ಆದರೆ ಸಮಗ್ರ ನೋಟವನ್ನುಳ್ಳ ದೂರದೃಷ್ಟಿಯ ವ್ಯಕ್ತಿಯೊಬ್ಬ ಗುರಿಯನ್ನು ನಿರ್ಧರಿಸುತ್ತಾನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಸಚಿವರು ಈ ಪಾತ್ರವನ್ನು ನಿರ್ವಹಿಸುತ್ತಾರೆ.

### ಪ್ರಧಾನಮಂತ್ರಿ ಮತ್ತು ಸಚಿವ ಮಂಡಳಿ (Council of Ministers (ಕೌನ್ಸಿಲ್ ಆಫ್ ಮಿನಿಸ್ಟರ್ಸ್))

ಪ್ರಧಾನ ಮಂತ್ರಿ ದೇಶದ ಅತ್ಯಂತ ಪ್ರಮುಖ ರಾಜಕೀಯ ಸಂಸ್ಥೆ. ಆದರೆ ಪ್ರಧಾನ ಮಂತ್ರಿ ಹುದ್ದೆಗೆ ನೇರ ಚುನಾವಣೆ ಇಲ್ಲ. ರಾಷ್ಟ್ರಪತಿಗಳು ಪ್ರಧಾನ ಮಂತ್ರಿಗಳನ್ನು ನೇಮಕ ಮಾಡುತ್ತಾರೆ. ರಾಷ್ಟ್ರಪತಿ ತಮಗೆ (ಆಕೆಯ) ಇಷ್ಟವಾದ ಯಾರನ್ನೋ ನೇಮಕ ಮಾಡುವಂತಿಲ್ಲ. ಲೋಕಸಭೆಯಲ್ಲಿ ಬಹುಮತ ಹೊಂದಿರುವ ಪಕ್ಷದ ನಾಯಕನನ್ನು ಅಥವಾ ಲೋಕಸಭೆಯಲ್ಲಿ ಬಹುಮತ ಹೊಂದಿರುವ ಪಕ್ಷಗಳ ಸಮ್ಮಿಶ್ರಕೂಟದ ನಾಯಕನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಕ ಮಾಡುತ್ತಾರೆ. ಒಂದು ವೇಳೆ ಯಾವುದೇ ಒಂದು ಪಕ್ಷವಾಗಲಿ ಮೈತ್ರಿಕೂಟವಾಗಲಿ ಬಹುಮತ ಗಳಿಸಿಲ್ಲ ಎಂದಾದರೆ ರಾಷ್ಟ್ರಪತಿಗಳು ಯಾವ ವ್ಯಕ್ತಿಗೆ ಬಹುಮತವನ್ನು ಸಾಬೀತುಪಡಿಸುವ ಬಹುತೇಕ ಸಾಧ್ಯತೆ ಇರುತ್ತದೋ ಅಂತಹವರನ್ನು ನೇಮಕ ಮಾಡುತ್ತಾರೆ. ಪ್ರಧಾನ ಮಂತ್ರಿಗಳಿಗೆ ಯಾವುದೇ ನಿಗದಿತ ಅಧಿಕಾರಾವಧಿ ಇರುವುದಿಲ್ಲ. ಅವರು ಎಂದಿನ ತನಕ ಬಹುಮತವಿರುವ ಪಕ್ಷ ಅಥವಾ ಸಮ್ಮಿಶ್ರಕೂಟದ ನಾಯಕನಾಗಿ ಮುಂದುವರಿಯುವರೋ ಅಂದಿನ ತನಕವೂ ಅಧಿಕಾರದಲ್ಲಿ ಇರುತ್ತಾರೆ.

ಪ್ರಧಾನ ಮಂತ್ರಿಗಳ ನೇಮಕದ ನಂತರ ರಾಷ್ಟ್ರಪತಿಗಳು ಪ್ರಧಾನಿ ಅವರ ಸಲಹೆ ಮೇರೆಗೆ ಇತರೆ ಸಚಿವರನ್ನು ನೇಮಕ ಮಾಡುತ್ತಾರೆ. ಸಾಮಾನ್ಯವಾಗಿ ಸಚಿವರುಗಳು ಲೋಕಸಭೆಯಲ್ಲಿ ಬಹುಮತ ಹೊಂದಿರುವ ಆಯಾ ಪಕ್ಷದ ಅಥವಾ ಸಮ್ಮಿಶ್ರಕೂಟದ ಸದಸ್ಯರಾಗಿರುತ್ತಾರೆ. ಪ್ರಧಾನಮಂತ್ರಿಗಳು ಸಚಿವರ ಆಯ್ಕೆಯಲ್ಲಿ ಸ್ವತಂತ್ರರು, ಆದರೆ ಸಚಿವರು ಸಂಸತ್ತಿನ ಸದಸ್ಯರಾಗಿರಬೇಕು. ಕೆಲವೊಮ್ಮೆ, ಸಂಸತ್ತಿನ ಸದಸ್ಯರಲ್ಲದ ವ್ಯಕ್ತಿಯೂ ಸಹ ಸಚಿವರಾಗಬಹುದು. ಆದರೆ ಅಂತಹ ವ್ಯಕ್ತಿ ಸಚಿವನಾಗಿ ನೇಮಕಗೊಂಡ ಆರು ತಿಂಗಳ ಒಳಗೆ ಸಂಸತ್ತಿನ ಯಾವುದಾದರೂ ಒಂದು ಸದನದ ಸದಸ್ಯನಾಗಿ ಚುನಾಯಿತನಾಗಬೇಕು.

ಸಚಿವ ಮಂಡಳಿ (ಕೌನ್ಸಿಲ್ ಆಫ್ ಮಿನಿಸ್ಟರ್ಸ್) ಎಂಬುದು ಎಲ್ಲ ಸಚಿವರನ್ನು ಒಳಗೊಂಡ ವ್ಯವಸ್ಥೆಯನ್ನು ಅಧಿಕೃತವಾಗಿ ಕರೆಯುವ ಹೆಸರು. ಇದರಲ್ಲಿ ಸಾಮಾನ್ಯವಾಗಿ 60 ರಿಂದ 80 ವಿವಿಧ ಶ್ರೇಣಿಯ ಸಚಿವರು ಇರುತ್ತಾರೆ.

- **ಸಂಪುಟ ಸಚಿವರು:** ಇವರು ಸಾಮಾನ್ಯವಾಗಿ ಆಡಳಿತ ಪಕ್ಷದ ಅಥವಾ ಪಕ್ಷಗಳ ಹಿರಿಯ ಮಟ್ಟದ ನಾಯಕರಾಗಿರುತ್ತಾರೆ. ಅವರು ಪ್ರಮುಖ ಖಾತೆಗಳ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಈ ಸಂಪುಟ ಸಚಿವರುಗಳೇ ಸಚಿವ ಮಂಡಳಿಯ ಹೆಸರಿನಲ್ಲಿ ಸಭೆಗಳನ್ನು ನಡೆಸಿ ನಿರ್ಧಾರಗಳನ್ನು ಕೈಗೊಳ್ಳುವರು. ಆದ್ದರಿಂದ ಸಚಿವ ಸಂಪುಟವು ಇಡೀ ಸಚಿವ ಮಂಡಳಿಯ ಒಂದು ಒಳಪದರು ಆಗಿರುತ್ತದೆ. ಇದರಲ್ಲಿ ಸುಮಾರು 20 ಸಚಿವರು ಇರುತ್ತಾರೆ.

- **ಸ್ವತಂತ್ರ ಹೊಣೆ ಹೊತ್ತಿರುವ ರಾಜ್ಯ ಸಚಿವರು:** ಇವರು ಸಾಮಾನ್ಯವಾಗಿ ಸಣ್ಣ ಸಚಿವಾಲಯಗಳ ಉಸ್ತುವಾರಿ ಹೊಂದಿರುತ್ತಾರೆ. ಇವರು ವಿಶೇಷ ಆಹ್ವಾನ ಇದ್ದಾಗ ಮಾತ್ರ ಸಂಪುಟ ಸಭೆಗಳಲ್ಲಿ ಭಾಗವಹಿಸುತ್ತಾರೆ.

- **ರಾಜ್ಯ ಸಚಿವರು:** ಇವರು ಸಂಪುಟ ಸಚಿವರ ಜೊತೆ ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಬೇಕು.

ಎಲ್ಲಾ ಸಚಿವರು ನಿಗದಿತವಾಗಿ ಸಭೆ ಸೇರಿ, ಎಲ್ಲ ವಿಷಯಗಳನ್ನು ಚರ್ಚಿಸಲು ವಾಸ್ತವವಾಗಿ ಕಷ್ಟಸಾಧ್ಯವಾಗಿರುವುದರಿಂದ ಸಚಿವ ಸಂಪುಟ ಸಭೆಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳಲಾಗುವುದು. ಹಾಗಾಗಿ ಹೆಚ್ಚಿನ ದೇಶಗಳಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಸಚಿವ ಸಂಪುಟ ಸ್ವರೂಪದ ಸರ್ಕಾರವೆಂದೇ ಕರೆಯಲಾಗುತ್ತದೆ. ಸಚಿವ ಸಂಪುಟವು ಒಂದು ತಂಡವಾಗಿ ಕೆಲಸ ನಿರ್ವಹಿಸುತ್ತದೆ. ಸಚಿವರಲ್ಲಿ ಬೇರೆ ಬೇರೆ ಅಭಿಪ್ರಾಯಗಳು ಹಾಗೂ ನಿಲುವುಗಳು ಇದ್ದರೂ ಪ್ರತಿಯೊಬ್ಬರೂ ಸಂಪುಟದ ನಿರ್ಧಾರಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕು. ಯಾವುದೇ ಸಚಿವರು ಸರ್ಕಾರದ ಯಾವುದೇ ನಿರ್ಧಾರವನ್ನು – ಅದು ಬೇರೊಂದು ಸಚಿವಾಲಯ ಅಥವಾ ಇಲಾಖೆಯದ್ದಾಗಿದ್ದರೂ ಸಹ – ಬಹಿರಂಗವಾಗಿ ಟೀಕಿಸುವಂತಿಲ್ಲ. ಪ್ರತಿಯೊಂದು ಸಚಿವಾಲಯವೂ ಕಾರ್ಯದರ್ಶಿಗಳನ್ನು ಹೊಂದಿರುತ್ತದೆ. ಅವರು ನಾಗರಿಕ ಸೇವಾ ಅಧಿಕಾರಿಗಳಾಗಿರುತ್ತಾರೆ. ಈ ಕಾರ್ಯದರ್ಶಿಗಳು ಸಚಿವರಿಗೆ ನಿರ್ಧಾರಗಳನ್ನು ಕೈಗೊಳ್ಳಲು ಅಗತ್ಯ ಹಿನ್ನೆಲೆಯ ಮಾಹಿತಿಗಳನ್ನು ಒದಗಿಸುತ್ತಾರೆ. ಸಂಪುಟ ಒಂದು ತಂಡವಾಗಿದ್ದು, ಇದಕ್ಕೆ ಸಂಪುಟ ಸಚಿವಾಲಯ ನೆರವು ನೀಡುತ್ತದೆ. ಇದು ಹಲವು ಹಿರಿಯ ನಾಗರಿಕ ಸೇವಾ ಅಧಿಕಾರಿಗಳನ್ನು ಒಳಗೊಂಡಿದ್ದು, ಅವರು ನಾನಾ ಸಚಿವಾಲಯಗಳು ಕೆಲಸ ಮಾಡುವುದನ್ನು ಸಮನ್ವಯಿಸಲು ಪ್ರಯತ್ನಿಸುತ್ತಾರೆ.

**ಪ್ರಧಾನ ಮಂತ್ರಿಯ ಅಧಿಕಾರ**

ಸಂವಿಧಾನದಲ್ಲಿ ಪ್ರಧಾನಮಂತ್ರಿಯವರ ಅಥವಾ ಅವರ ಸಚಿವರುಗಳ ಅಧಿಕಾರದ ಬಗ್ಗೆಯಾಗಲಿ ಅಥವಾ ಅವರ ಪರಸ್ಪರ ಸಂಬಂಧದ ಬಗ್ಗೆಯಾಗಲಿ ಹೆಚ್ಚೇನೂ ಹೇಳಲಾಗಿಲ್ಲ. ಆದರೆ ಸರ್ಕಾರದ ಮುಖ್ಯಸ್ಥರಾಗಿರುವ ಪ್ರಧಾನಮಂತ್ರಿಗಳಿಗೆ ವಿಸ್ತೃತ ಅಧಿಕಾರಗಳಿರುತ್ತವೆ. ಅವರು ಸಂಪುಟ ಸಭೆಗಳ ಅಧ್ಯಕ್ಷತೆ ವಹಿಸುವರು. ಅವರು

ನಾನಾ ಇಲಾಖೆಗಳ ಕೆಲಸ ಕಾರ್ಯಗಳ ಸಮನ್ವಯ ಮಾಡುವರು. ಇಲಾಖೆಗಳ ನಡುವೆ ಭಿನ್ನಾಭಿಪ್ರಾಯಗಳು ಏರ್ಪಟ್ಟಾಗ ಅವರ ನಿರ್ಧಾರವೇ ಅಂತಿಮವಾಗಿರುತ್ತದೆ. ನಾನಾ ಸಚಿವಾಲಯಗಳ ಮೇಲೆ ಅವರು ಸಾಮಾನ್ಯವಾಗಿ ನಿಗಾ ವಹಿಸುತ್ತಾರೆ. ಎಲ್ಲ ಸಚಿವರು ಅವರ ನಾಯಕತ್ವದಡಿ ಕೆಲಸ ಮಾಡುತ್ತಾರೆ. ಪ್ರಧಾನಮಂತ್ರಿಗಳು ಸಚಿವರಿಗೆ ಕೆಲಸ ಕಾರ್ಯಗಳನ್ನು ಹಂಚಿಕೆ ಮತ್ತು ಮರು ಹಂಚಿಕೆ ಮಾಡುತ್ತಾರೆ. ಸಚಿವರನ್ನು ವಜಾಗೊಳಿಸುವ ಅಧಿಕಾರವೂ ಅವರಿಗಿರುತ್ತದೆ. ಪ್ರಧಾನಮಂತ್ರಿ ರಾಜೀನಾಮೆ ನೀಡಿದರೆ ಇಡೀ ಸಂಪುಟ ರಾಜೀನಾಮೆ ನೀಡಬೇಕಾಗುತ್ತದೆ.

ಹಾಗಾಗಿ, ಭಾರತದಲ್ಲಿ ಸಚಿವ ಸಂಪುಟ ಅತ್ಯಂತ ಶಕ್ತಿಶಾಲಿ ಸಂಸ್ಥೆಯಾಗಿದ್ದರೆ, ಸಂಪುಟದೊಳಗೆ ಪ್ರಧಾನಮಂತ್ರಿಗಳು ಅತ್ಯಂತ ಶಕ್ತಿಶಾಲಿಯಾಗಿರುತ್ತಾರೆ. ವಿಶ್ವದಲ್ಲಿನ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಮಂತ್ರಿಗಳ ಅಧಿಕಾರ ಇತ್ತೀಚಿನ ದಶಕಗಳಲ್ಲಿ ಸಾಕಷ್ಟು ಹೆಚ್ಚಾಗಿದೆ. ಹೀಗಾಗಿ ಕೆಲವೊಮ್ಮೆ ಸಂಸದೀಯ ಪ್ರಜಾಪ್ರಭುತ್ವವೆಂದರೆ ಪ್ರಧಾನ ಮಂತ್ರಿ ಸ್ವರೂಪದ ಸರ್ಕಾರ ಎಂದು ಪರಿಗಣಿಸಲಾಗುತ್ತದೆ. ರಾಜಕೀಯ ಪಕ್ಷಗಳು ರಾಜಕೀಯದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿರುವುದರಿಂದ ಪ್ರಧಾನಮಂತ್ರಿಗಳು ಪಕ್ಷದ ಮೂಲಕ ಸಂಪುಟವನ್ನೂ ಸಂಸತ್ತನ್ನೂ ನಿಯಂತ್ರಿಸುತ್ತಾರೆ. ರಾಜಕೀಯವೂ ಚುನಾವಣೆಯೂ ರಾಜಕೀಯ ಪಕ್ಷದ ಮೇಲ್ಮಟ್ಟದ ನಾಯಕರ ನಡುವಿನ ಬಿರುಸಿನ ಸ್ಪರ್ಧೆ ಎಂಬಂತೆ ಚಿತ್ರಿಸುವ ಮೂಲಕ ಈ ದಿನಗಳಲ್ಲಿ ಮಾಧ್ಯಮಗಳು ಕೂಡ ಈ ಒಲವಿಗೆ ತಮ್ಮ ಕೊಡುಗೆಯನ್ನು ನೀಡುತ್ತಿವೆ. ಭಾರತದಲ್ಲೂ ಸಹ ಪ್ರಧಾನಮಂತ್ರಿಗಳ ಬಳಿಯೇ ಅಧಿಕಾರ ಕೇಂದ್ರೀಕೃತವಾಗಿರುವ ಪ್ರವೃತ್ತಿಯನ್ನು ನಾವು ಕಂಡಿದ್ದೇವೆ. ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರು ಜನಸಮುದಾಯದ ಮೇಲೆ ಅತ್ಯಧಿಕ ಪ್ರಭಾವವನ್ನು ಹೊಂದಿದ್ದುದ್ದರಿಂದ ಅವರು ಅತ್ಯಂತ ಹೆಚ್ಚಿನ ಅಧಿಕಾರವನ್ನು ಪ್ರಯೋಗಿಸಿದರು. ಇಂದಿರಾ ಗಾಂಧಿ ಕೂಡ ಸಂಪುಟದ ಅವರ ಸಹೋದ್ಯೋಗಿಗಳಿಗೆ ಹೋಲಿಸಿದರೆ ಅತ್ಯಂತ ಶಕ್ತಿಶಾಲಿ ನಾಯಕಿಯಾಗಿದ್ದರು. ಪ್ರಧಾನ ಮಂತ್ರಿಗಳು ಚಲಾಯಿಸುವ ಅಧಿಕಾರದ ವ್ಯಾಪ್ತಿಯು ಆ ಹುದ್ದೆಯಲ್ಲಿ ಇರುವ ವ್ಯಕ್ತಿಯ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ.

ಆದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ ಸಮ್ಮಿಶ್ರಕೂಟ ರಾಜಕಾರಣ ಹುಟ್ಟಿಕೊಂಡಿರುವುದರಿಂದ ಪ್ರಧಾನಮಂತ್ರಿಗಳ ಅಧಿಕಾರದ ಮೇಲೆ ಕೆಲವೊಂದು ನಿರ್ಬಂಧಗಳು ಎದುರಾಗಿವೆ. ಸಮ್ಮಿಶ್ರ ಸರ್ಕಾರದ ಪ್ರಧಾನ ಮಂತ್ರಿ ತನ್ನ ಇಚ್ಛೆಯಂತೆ ನಿರ್ಧಾರಗಳನ್ನು ಕೈಗೊಳ್ಳಲಾಗುವುದಿಲ್ಲ. ಅವರು ತಮ್ಮ ಪಕ್ಷದ ಹಾಗೂ ಮೈತ್ರಿ ಕೂಟದ ಭಿನ್ನ ಗುಂಪುಗಳು ಮತ್ತು ಬಣಗಳನ್ನು ಹೊಂದಿಸಿಕೊಂಡು ಹೋಗಬೇಕಾಗುತ್ತದೆ. ಅಲ್ಲದೆ ಅಲ್ಲದೆ ಸರ್ಕಾರದ ಅಳಿವು–ಉಳಿವು ಬೆಂಬಲಿಗರಾದ ಸಮ್ಮಿಶ್ರಕೂಟ ಹಾಗೂ ಇತರ ಪಕ್ಷಗಳ ಮೇಲೆ ಅವಲಂಬಿತವಾಗಿರುವುದರಿಂದ ಅವರ ನಿಲುವುಗಳಿಗೂ ಅಭಿಪ್ರಾಯಗಳಿಗೂ ಕಿವಿಗೊಡಬೇಕಾಗುತ್ತದೆ.

**ರಾಷ್ಟ್ರಪತಿ**

ಪ್ರಧಾನಮಂತ್ರಿಗಳು ಸರ್ಕಾರದ ಮುಖ್ಯಸ್ಥರಾಗಿದ್ದರೆ, ರಾಷ್ಟ್ರಪತಿಗಳು ರಾಷ್ಟ್ರದ ಮುಖ್ಯಸ್ಥರಾಗಿರುತ್ತಾರೆ. ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ರಾಷ್ಟ್ರಪತಿಗಳ ಅಧಿಕಾರ ಕೇವಲ ಸಾಂಕೇತಿಕವಾಗಿರುತ್ತದೆ. ಭಾರತದ ರಾಷ್ಟ್ರಪತಿಗಳು, ಬ್ರಿಟನ್ನಿನ ರಾಣಿಯಂತೆ. ಅವರ ಬಹುತೇಕ ಕರ್ತವ್ಯಗಳು ವಿಧ್ಯುಕ್ತವಾಗಿರುತ್ತದೆ. ದೇಶದ ಎಲ್ಲಾ

ರಾಜಕೀಯ ಸಂಸ್ಥೆಗಳು ಏಕರೂಪವಾಗಿ ಕಾರ್ಯನಿರ್ವಹಿಸಿ, ರಾಷ್ಟ್ರದ ಧ್ಯೇಯೋದ್ದೇಶಗಳನ್ನು ಸಾಧಿಸುವಂತೆ ರಾಷ್ಟ್ರಪತಿಗಳು ಈ ಸಂಸ್ಥೆಗಳ ಕಾರ್ಯ ನಿರ್ವಹಣೆಯ ಒಟ್ಟಾರೆ ಮೇಲ್ವಿಚಾರಣೆ ನಡೆಸುತ್ತಾರೆ.

ರಾಷ್ಟ್ರಪತಿಗಳು ಜನರಿಂದ ನೇರವಾಗಿ ಆಯ್ಕೆಯಾಗುವುದಿಲ್ಲ. ಸಂಸತ್ತಿಗೆ ಆಯ್ಕೆಯಾದ ಸದಸ್ಯರು (ಸಂಸದರು) ಮತ್ತು ಎಲ್ಲ ವಿಧಾನಸಭೆಗಳ ಶಾಸಕರು (ಎಂಎಲ್ಎ)ಗಳು ಅವರನ್ನು (ಆಕೆಯನ್ನು) ಆಯ್ಕೆ ಮಾಡುತ್ತಾರೆ. ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯಾಗಿ ಸ್ಪರ್ಧಿಸುವವರು ಚುನಾವಣೆಯಲ್ಲಿ ಗೆಲ್ಲಲು ಬಹುಪಾಲು ಮತಗಳನ್ನು ಪಡೆಯಬೇಕಾಗುತ್ತದೆ. ಇದು ರಾಷ್ಟ್ರಪತಿಗಳು (ತೋರಿಕೆಗಾದರೂ) ಇಡೀ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ ಎನ್ನುವುದನ್ನು ಖಾತ್ರಿಪಡಿಸುತ್ತದೆ. ಇದೇ ವೇಳೆ ಪ್ರಧಾನಮಂತ್ರಿಗಳು ಪಡೆದಂತೆ ನೇರ ಜನಾದೇಶವನ್ನು ರಾಷ್ಟ್ರಪತಿಗಳು ಪಡೆಯಲಾಗುವುದಿಲ್ಲ. ಇದು ಆಕೆ ಕೇವಲ ಸಾಂಕೇತಿಕ ಕಾರ್ಯಕಾರಿಯಾಗಿ ಇರುತ್ತಾರೆ ಎಂಬುದನ್ನು ಖಾತ್ರಿಪಡಿಸುತ್ತದೆ.

ಇದು ರಾಷ್ಟ್ರಪತಿಗಳ ಅಧಿಕಾರಗಳಿಗೂ ಅನ್ವಯಿಸುತ್ತದೆ. ನೀವು ಸಾಮಾನ್ಯವಾಗಿ ಸಂವಿಧಾನವನ್ನು ಓದಿದರೆ ಅವರಿಗೆ (ಆಕೆಗೆ) ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ಭಾವನೆಯನ್ನು ತಳೆಯಬಹುದು. ಸರ್ಕಾರದ ಎಲ್ಲಾ ಚಟುವಟಿಕೆಗಳು ರಾಷ್ಟ್ರಪತಿಗಳ ಹೆಸರಿನಲ್ಲೇ ನಡೆಯುತ್ತವೆ. ಸರ್ಕಾರದ ಎಲ್ಲಾ ಪ್ರಮುಖ ನೀತಿ ನಿರ್ಧಾರಗಳನ್ನೂ ಕಾನೂನುಗಳನ್ನೂ ಅವರ ಹೆಸರಿನಲ್ಲೇ ಹೊರಡಿಸಲಾಗುತ್ತದೆ. ಎಲ್ಲಾ ಪ್ರಮುಖ ನೇಮಕಗಳನ್ನು ರಾಷ್ಟ್ರಪತಿಗಳ ಹೆಸರಿನಲ್ಲೇ ಮಾಡಲಾಗುವುದು. ಇವುಗಳಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಗಳು, ಸುಪ್ರೀಂಕೋರ್ಟ್ ಹಾಗೂ ರಾಜ್ಯಗಳ ಹೈಕೋರ್ಟುಗಳ ನ್ಯಾಯಮೂರ್ತಿಗಳು, ರಾಜ್ಯಪಾಲರುಗಳು, ಚುನಾವಣಾ ಆಯುಕ್ತರು, ಇತರೆ ರಾಷ್ಟ್ರಗಳಿಗೆ ರಾಯಭಾರಿಗಳು ಸೇರುತ್ತವೆ. ಎಲ್ಲಾ ಅಂತರಾಷ್ಟ್ರೀಯ ಒಪ್ಪಂದಗಳು ಮತ್ತು ಒಡಂಬಡಿಕೆಗಳನ್ನು ರಾಷ್ಟ್ರಪತಿಗಳ ಹೆಸರಿನಲ್ಲಿ ಮಾಡಿಕೊಳ್ಳಲಾಗುವುದು. ರಾಷ್ಟ್ರಪತಿಗಳು ಭಾರತದ ಎಲ್ಲಾ ರಕ್ಷಣಾ ಪಡೆಗಳ ಮಹಾದಂಡನಾಯಕ ಆಗಿರುತ್ತಾರೆ.

ಆದರೆ ರಾಷ್ಟ್ರಪತಿಗಳು ಎಲ್ಲಾ ಅಧಿಕಾರವನ್ನು ಚಲಾಯಿಸುವುದು ಸಚಿವ ಮಂಡಳಿಯ ಸಲಹೆ ಮೇರೆಗೆ ಮಾತ್ರ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಂಡಿರಬೇಕು. ರಾಷ್ಟ್ರಪತಿಗಳು ಸಚಿವ ಮಂಡಳಿಯ ಸಲಹೆಗಳನ್ನು ಮರು ಪರಿಶೀಲಿಸಿ ಎಂದು ಕೇಳಬಹುದು. ಆದರೆ ಸಚಿವ ಮಂಡಳಿ ಅದೇ ಸಲಹೆಯನ್ನು ಮತ್ತೆ ನೀಡಿದಾಗ ಅವರು (ಆಕೆ) ಅದರಂತೆ ಕಾರ್ಯ ನಿರ್ವಹಿಸಲೇ ಬೇಕಾಗುತ್ತದೆ. ಅದೇ ರೀತಿ ಸಂಸತ್ ಅನುಮೋದಿಸಿದ ಮಸೂದೆ ರಾಷ್ಟ್ರಪತಿಗಳ ಅಂಕಿತ ಹಾಕಿದ ನಂತರವೇ ಕಾನೂನು ಎನಿಸಿಕೊಳ್ಳುತ್ತದೆ. ರಾಷ್ಟ್ರಪತಿಗಳು (ಆಕೆ) ಬಯಸಿದರೆ ಮಸೂದೆಯನ್ನು ಕೆಲ ಸಮಯ ವಿಳಂಬ ಮಾಡಬಹುದು; ಅಲ್ಲದೆ ಮರು ಪರಿಶೀಲನೆಗಾಗಿ ಸಂಸತ್‌ಗೆ ಮತ್ತೆ ಕಳುಹಿಸಿ ಕೊಡಬಹುದು. ಆದರೆ ಸಂಸತ್ತು ಪುನಃ ಅದನ್ನೇ ಅಂಗೀಕರಿಸಿದರೆ ಆಗ ಅವರು (ಆಕೆ) ಅದಕ್ಕೆ ಸಹಿ ಮಾಡಲೇಬೇಕು.

ಹಾಗಾಗಿ ನಿಮಗೆ ರಾಷ್ಟ್ರಪತಿಗಳು ನಿಜವಾಗಿಯೂ ಏನು ಕೆಲಸ ಮಾಡುತ್ತಾರೆ ಎನ್ನುವುದು ಕುತೂಹಲಿಯಾಗಿರಬಹುದು. ಅವರು (ಆಕೆ) ಸ್ವತಃ ತಾವಾಗಿಯೇ ಯಾವುದಾದರೂ ಕಾರ್ಯವನ್ನು ಮಾಡಬಹುದೇ? ಅವರು (ಆಕೆ) ಸ್ವತಃ ತಾವೇ ಮಾಡಬೇಕಾದ ಒಂದು ಕೆಲಸವಿದೆ: ಅದೇ ಪ್ರಧಾನಮಂತ್ರಿಗಳ ನೇಮಕ. ಚುನಾವಣೆಯಲ್ಲಿ ಒಂದು ಪಕ್ಷ ಅಥವಾ ಹಲವು ಪಕ್ಷಗಳ ಸಮ್ಮಿಶ್ರಕೂಟ ಸ್ಪಷ್ಟ ಬಹುಮತ ಗಳಿಸಿದರೆ

ಅಂತಹ ವೇಳೆ ರಾಷ್ಟ್ರಪತಿಗಳು ಲೋಕಸಭೆಯಲ್ಲಿ ಬಹುಮತ ಹೊಂದಿರುವ ಒಂದು ಪಕ್ಷ ಅಥವಾ ಸಮ್ಮಿಶ್ರಕೂಟದ ನಾಯಕನನ್ನು ಪ್ರಧಾನಿಯನ್ನಾಗಿ ನೇಮಕ ಮಾಡಬೇಕು. ಒಂದು ವೇಳೆ ಯಾವುದೇ ಪಕ್ಷ ಅಥವಾ ಸಮ್ಮಿಶ್ರಕೂಟ ಲೋಕಸಭೆಯಲ್ಲಿ ಬಹುಮತ ಗಳಿಸದಿದ್ದರೆ, ಆ ವೇಳೆ ರಾಷ್ಟ್ರಪತಿಗಳು (ಆಕೆಯು) ತಮ್ಮ ವಿವೇಚನಾ ಅಧಿಕಾರವನ್ನು ಬಳಸಬಹುದು. ಲೋಕಸಭೆಯಲ್ಲಿ ಯಾರು ಬಹುಮತ ಪಡೆಯುವ ಸಾಧ್ಯತೆಯಿದೆ ಎಂದು ರಾಷ್ಟ್ರಪತಿಗಳು (ಆಕೆಯು) ಭಾವಿಸುವರೋ, ಅವರನ್ನು ಪ್ರಧಾನ ಮಂತ್ರಿಯಾಗಿ ನೇಮಿಸಬಹುದು. ಅಂತಹ ಸಂದರ್ಭದಲ್ಲಿ ನಿಗದಿತ ಅವಧಿಯಲ್ಲಿ ಲೋಕಸಭೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ಹೊಸದಾಗಿ ನೇಮಕಗೊಂಡ ಪ್ರಧಾನಮಂತ್ರಿಗೆ ರಾಷ್ಟ್ರಪತಿ ಕೇಳಬಹುದು.

## 5.4 ನ್ಯಾಯಾಂಗ

ಮತ್ತೊಮ್ಮೆ ನಾವು, ಕೊನೇಬಾರಿ, ಕಚೇರಿ ಜ್ಞಾಪನಾ ಪತ್ರದ ವಿಚಾರಕ್ಕೆ ಹಿಂದಿರುಗೋಣ. ಈ ಬಾರಿ ಆ ಕತೆಯನ್ನು ಮತ್ತೆ ನನೆಪು ಮಾಡಿಕೊಳ್ಳುವುದು ಬೇಡ. ಆದರೆ ಆ ಕತೆಯ ಬೇರೆ ಸಾಧ್ಯತೆಯ ಬಗ್ಗೆ ಆಲೋಚಿಸೋಣ. ಅಂದು ಸುಪ್ರೀಂಕೋರ್ಟ್ ಒಂದು ತೀರ್ಪನ್ನು ಕೊಟ್ಟಾಗ ಎಲ್ಲರೂ ಅದನ್ನು ಒಪ್ಪಿಕೊಂಡ ದೆಸೆಯಿಂದ ಕತೆ ಒಂದು ತೃಪ್ತಿದಾಯಕ ಮುಕ್ತಾಯವನ್ನು ಕಂಡಿತು. ಆದರೆ ಈ ಕೆಳಗಿನ ಸಂದರ್ಭಗಳು ಎದುರಾದರೆ ಏನಾಗಬಹುದು ಎಂದು ಕಲ್ಪಿಸಿಕೊಳ್ಳಿ:

- ದೇಶದಲ್ಲಿ ಸುಪ್ರೀಂಕೋರ್ಟ್ ನಂತಹ ಯಾವುದೇ ಸಂಸ್ಥೆ ಇಲ್ಲದಿದ್ದರೆ.
- ಒಂದು ವೇಳೆ ಸುಪ್ರೀಂಕೋರ್ಟ್ ಇದ್ದರೂ ಅದಕ್ಕೆ ಸರ್ಕಾರದ ನಿರ್ಧಾರಗಳ ತಪ್ಪು-ಸರಿಗಳನ್ನು ತೀರ್ಮಾನಿಸುವ ಅಧಿಕಾರ ಇಲ್ಲದಿದ್ದರೆ.
- ಒಂದು ವೇಳೆ ಅಧಿಕಾರವಿದ್ದರೂ ಸಹ ಸುಪ್ರೀಂಕೋರ್ಟ್ ನ್ಯಾಯಯುತ ತೀರ್ಪು ನೀಡುತ್ತದೆ ಎಂಬುದರ ಬಗ್ಗೆ ಯಾರಿಗೂ ವಿಶ್ವಾಸ ಇಲ್ಲದಿದ್ದರೆ.
- ಒಂದು ವೇಳೆ ನ್ಯಾಯಯುತ ತೀರ್ಪು ನೀಡಿದರೂ ಸಹ ಸರ್ಕಾರದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದವರು ಆ ತೀರ್ಪನ್ನು ಒಪ್ಪಿಕೊಳ್ಳದಿದ್ದರೆ.

ಈ ಕಾರಣಕ್ಕಾಗಿಯೇ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ ಸ್ವತಂತ್ರ ಮತ್ತು ಬಲಿಷ್ಠ ನ್ಯಾಯಾಂಗ ಅತ್ಯಂತ ಅಗತ್ಯವಾಗಿದೆ. ದೇಶದಲ್ಲಿ ನಾನಾ ಹಂತಗಳಲ್ಲಿನ ನ್ಯಾಯಾಲಯಗಳನ್ನೆಲ್ಲಾ ಒಟ್ಟುಗೂಡಿಸಿದ್ದನ್ನು ನಾವು ನ್ಯಾಯಾಂಗ ಎಂದು ಕರೆಯುತ್ತೇವೆ. ಭಾರತೀಯ ನ್ಯಾಯಾಂಗದಲ್ಲಿ ಇಡೀ ದೇಶಕ್ಕೆ ಒಂದು ಸುಪ್ರೀಂಕೋರ್ಟ್ ಇದ್ದು, ರಾಜ್ಯಗಳಲ್ಲಿ ಹೈಕೋರ್ಟ್, ಜಿಲ್ಲಾ ಮಟ್ಟದ ನ್ಯಾಯಾಲಯಗಳು ಮತ್ತು ಸ್ಥಳೀಯ ಮಟ್ಟದ ನ್ಯಾಯಾಲಯಗಳು ಇರುತ್ತವೆ. ಭಾರತದ ನ್ಯಾಯಾಂಗ ಸುಸಂಘಟಿತವಾಗಿದೆ. ಅಂದರೆ ಅದರರ್ಥ ಸುಪ್ರೀಂಕೋರ್ಟ್ ದೇಶದ ಇಡೀ ನ್ಯಾಯಾಂಗದ ಆಡಳಿತವನ್ನು ನಿಯಂತ್ರಿಸುತ್ತದೆ. ಅದರ ನಿರ್ಧಾರಕ್ಕೆ ದೇಶದ ಎಲ್ಲಾ ನ್ಯಾಯಾಲಗಳು ತಲೆಬಾಗಲೇಬೇಕು. ಅದು ಯಾವುದೇ ವ್ಯಾಜ್ಯವನ್ನು ಪರಿಶೀಲನೆಗೆ ಎತ್ತಿಕೊಳ್ಳಬಹುದು.

- ದೇಶದ ಪ್ರಜೆಗಳ ನಡುವಿನ ವ್ಯಾಜ್ಯಗಳು;
- ಪ್ರಜೆಗಳು ಮತ್ತು ಸರ್ಕಾರಗಳ ನಡುವಿನ ವ್ಯಾಜ್ಯಗಳು;
- ಎರಡು ಅಥವಾ ಅಧಿಕ ರಾಜ್ಯಗಳ ನಡುವಿನ ವ್ಯಾಜ್ಯಗಳು; ಮತ್ತು
- ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ ವ್ಯಾಜ್ಯಗಳು.

ಇದು ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳ ಮೇಲ್ಮನವಿಯ ಅತಿದೊಡ್ಡ ನ್ಯಾಯಾಲಯ. ಹೈಕೋರ್ಟ್ ಆದೇಶಗಳ ವಿರುದ್ಧದ ಮೇಲ್ಮನವಿಗಳನ್ನು ಇದು ವಿಚಾರಣೆ ನಡೆಸಬಹುದು.

ನ್ಯಾಯಾಂಗದ ಸ್ವಾತಂತ್ರ್ಯ ಎಂದರೆ ಅದು ಶಾಸಕಾಂಗ ಮತ್ತು ಕಾರ್ಯಾಂಗದ ನಿಯಂತ್ರಣದಲ್ಲಿ ಇರುವುದಿಲ್ಲ ಎಂದರ್ಥ. ನ್ಯಾಯಮೂರ್ತಿಗಳು ಸರ್ಕಾರದ ನಿರ್ದೇಶನಗಳಂತೆ ನಡೆದುಕೊಳ್ಳುವುದಿಲ್ಲ ಅಥವಾ ಅಧಿಕಾರದಲ್ಲಿ ಇರುವ ಪಕ್ಷ ಆಶಿಸಿದಂತೆ ವರ್ತಿಸುವುದಿಲ್ಲ. ಆದ್ದರಿಂದಲೇ ಎಲ್ಲಾ ಆಧುನಿಕ ಪ್ರಜಾಪ್ರಭುತ್ವಗಳಲ್ಲಿ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗದ ಅಂಕೆಯೊಳಗೆ ಇರುವುದಿಲ್ಲ. ಭಾರತವೂ ಇದನ್ನು ಸಾಧಿಸಿದೆ. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳನ್ನು ಪ್ರಧಾನಮಂತ್ರಿಗಳ ಸಲಹೆ ಮತ್ತು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಸಮಾಲೋಚನೆಯೊಂದಿಗೆ ರಾಷ್ಟ್ರಪತಿಗಳು ನೇಮಕ ಮಾಡುವರು. ವಾಸ್ತವದಲ್ಲಿ ಅದರರ್ಥ, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ಗೆ ಹೊಸ ನ್ಯಾಯಮೂರ್ತಿಗಳನ್ನು ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳು ಆಯ್ಕೆ ಮಾಡುವರು. ಈ ವಿಚಾರದಲ್ಲಿ ರಾಜಕೀಯ ಕಾರ್ಯಾಂಗದ ಹಸ್ತಕ್ಷೇಪಕ್ಕೆ ಬಹಳ ಕಡಮೆ ಅವಕಾಶವಿರುತ್ತದೆ. ಸಾಮಾನ್ಯವಾಗಿ ಸುಪ್ರೀಂಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿಗಳನ್ನು ಮುಖ್ಯ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗುವುದು. ಒಮ್ಮೆ ಸುಪ್ರೀಂಕೋರ್ಟ್ ನ ಅಥವಾ ಹೈಕೋರ್ಟ್ ನ ನ್ಯಾಯಮೂರ್ತಿಯಾಗಿ ನೇಮಕಗೊಂಡರೆ ಆತ ಅಥವಾ ಆಕೆಯನ್ನು ಅವರ ಸ್ಥಾನದಿಂದ ತೆಗೆದು ಹಾಕುವುದು ತುಂಬಾ ಕಷ್ಟಕರ. ಅವರನ್ನು ವಜಾಗೊಳಿಸುವುದು ಭಾರತದ ರಾಷ್ಟ್ರಪತಿಯನ್ನು ವಜಾಗೊಳಿಸುವಷ್ಟೇ ಕಷ್ಟಕರವಾದುದು. ನ್ಯಾಯಮೂರ್ತಿಯನ್ನು ಸಂಸತ್ತಿನ ಉಭಯ ಸದನಗಳು ಪ್ರತ್ಯೇಕವಾಗಿ ಮೂರನೇ ಎರಡರಷ್ಟು ಬಹುಮತದೊಂದಿಗೆ ವಾಗ್ದಂಡನೆ ನಿರ್ಣಯವನ್ನು ಅಂಗೀಕರಿಸುವ ಮೂಲಕ ಮಾತ್ರವೇ ವಜಾಗೊಳಿಸಬಹುದು. ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅಂತಹ ಘಟನೆ ಇವರೆಗೂ ನಡೆದಿಲ್ಲ.

ಭಾರತದ ನ್ಯಾಯಾಂಗ ವಿಶ್ವದಲ್ಲೇ ಅತ್ಯಂತ ಶಕ್ತಿಶಾಲಿ ನ್ಯಾಯಾಂಗಗಳಲ್ಲಿ ಒಂದಾಗಿದೆ. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಗಳಿಗೆ ದೇಶದ ಸಂವಿಧಾನವನ್ನು ವ್ಯಾಖ್ಯಾನಿಸುವ ಅಧಿಕಾರವಿದೆ. ರಾಜ್ಯ ಅಥವಾ ಕೇಂದ್ರ ಮಟ್ಟದಲ್ಲಿ ಶಾಸಕಾಂಗದ ಯಾವುದೇ ಕಾನೂನು ಅಥವಾ ಕಾರ್ಯಾಂಗದ ಯಾವುದೇ ನಿರ್ಧಾರ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದೆನಿಸಿದರೆ ಅದನ್ನು ಅಮಾನ್ಯ ಎಂದು ಅವುಗಳು ಘೋಷಿಸಬಹುದು. ಆ ಮೂಲಕ ನ್ಯಾಯಮೂರ್ತಿಗಳು ತಮ್ಮ ಮುಂದೆ ಪ್ರಶ್ನಿಸಲಾದ ಕಾರ್ಯಾಂಗದ ಯಾವುದೇ ನಿರ್ಧಾರ ಅಥವಾ ಯಾವುದೇ ಶಾಸನ ಸಂವಿಧಾನಾತ್ಮಕವಾಗಿ ಮಾನ್ಯವೇ ಎಂಬುದನ್ನು

ನಿರ್ಣಯಿಸಬಹುದು. ಇದನ್ನು ನ್ಯಾಯಾಂಗ ಪರಾಮರ್ಶೆ ಎಂದು ಕರೆಯಲಾಗುವುದು. ಸಂವಿಧಾನದ ತಿರುಳು ಅಥವಾ ಮೂಲತತ್ವಗಳು ಸಂಸತ್ ಬದಲಾಯಿಸುವಂತಿಲ್ಲ ಎಂದು ಭಾರತದ ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

ಭಾರತೀಯ ನ್ಯಾಯಾಂಗದ ಅಧಿಕಾರ ಮತ್ತು ಸ್ವಾತಂತ್ರ್ಯದಿಂದಾಗಿ ಅದು ಮೂಲಭೂತ ಹಕ್ಕುಗಳ ಸಂರಕ್ಷಕನಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಜನರು ತಮ್ಮ ಯಾವುದೇ ಹಕ್ಕುಗಳ ಉಲ್ಲಂಘನೆಯಾದಾಗ ಅದಕ್ಕೆ ಪರಿಹಾರ ಕೋರಿ ನ್ಯಾಯಾಲಯಗಳಿಗೆ ಮೊರೆ ಹೋಗಬಹುದು ಎಂಬ ವಿಷಯವನ್ನು ಮುಂದಿನ ಅಧ್ಯಾಯದಲ್ಲಿ ನಾವು ನೋಡೋಣ. ಇತ್ತೀಚಿನ ವರ್ಷಗಳಲ್ಲಿ ನ್ಯಾಯಾಲಯಗಳು ಸಾರ್ವಜನಿಕ ಹಿತಾಸಕ್ತಿ ಹಾಗೂ ಮಾನವ ಹಕ್ಕುಗಳ ರಕ್ಷಣೆ ಮಾಡುವಂತೆ ಹಲವು ತೀರ್ಪುಗಳನ್ನು ಮತ್ತು ನಿರ್ದೇಶನಗಳನ್ನು ನೀಡಿವೆ. ಸರ್ಕಾರದ ನಿರ್ಧಾರಗಳಿಂದಾಗಿ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗಿದೆ ಎಂದಾಗ ಯಾರೇ ಆದರೂ ನ್ಯಾಯಾಲಯಗಳ ಮೊರೆ ಹೋಗಬಹುದು. ಇದನ್ನು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದು ಕರೆಯಲಾಗುತ್ತದೆ. ನಿರ್ಧಾರಗಳನ್ನು ಕೈಗೊಳ್ಳುವ ತನ್ನ ಅಧಿಕಾರವನ್ನು ಸರ್ಕಾರ ದುರುಪಯೋಗ ಮಾಡದಂತೆ ನ್ಯಾಯಾಲಯಗಳು ಹಸ್ತಕ್ಷೇಪ ಮಾಡುತ್ತವೆ. ಸರ್ಕಾರಿ ಅಧಿಕಾರಿಗಳ ದುರ್ವ್ಯವಹಾರಗಳಿಗೆ ನ್ಯಾಯಾಲಯಗಳು ತಡೆ ಒಡ್ಡುತ್ತವೆ. ಇದರಿಂದಾಗಿ ಜನರಲ್ಲಿ ನ್ಯಾಯಾಂಗದ ಬಗ್ಗೆ ಹೆಚ್ಚಿನ ಪ್ರಮಾಣದ ವಿಶ್ವಾಸವಿದೆ.

## ಪಾರಿಭಾಷಿಕ ಕೋಶ (ಗ್ಲಾಸರಿ)

**ಸಮ್ಮಿಶ್ರಕೂಟ ಸರ್ಕಾರ:** ಶಾಸನ ಸಭೆಯಲ್ಲಿ ಯಾವುದೇ ಒಂದು ಪಕ್ಷ ಬಹುಮತ ಪಡೆಯದೇ ಇದ್ದ ಸಂದರ್ಭದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಪಕ್ಷಗಳು ಸೇರಿ ರಚನೆ ಮಾಡಿದ ಸರ್ಕಾರಕ್ಕೆ ಸಮ್ಮಿಶ್ರಕೂಟ ಸರ್ಕಾರ ಎಂದು ಕರೆಯಲಾಗುವುದು.

**ಕಾರ್ಯಾಂಗ:** ಸಂವಿಧಾನ ಮತ್ತು ದೇಶದ ಕಾನೂನುಗಳನ್ನು ಆಧರಿಸಿ ಪ್ರಮುಖ ನೀತಿಗಳನ್ನು ಉಪಕ್ರಮಿಸಲು, ನಿರ್ಧಾರ ಕೈಗೊಳ್ಳಲು ಹಾಗೂ ಅವುಗಳನ್ನು ಅನುಷ್ಠಾನಗೊಳಿಸಲು ಅಧಿಕಾರ ಹೊಂದಿರುವ ಹಲವು ವ್ಯಕ್ತಿಗಳ ಒಂದು ಸಂಸ್ಥೆ.

**ಸರ್ಕಾರ:** ಕ್ರಮಬದ್ಧ ಜನಜೀವನವನ್ನು ಖಾತ್ರಿ ಪಡಿಸಲು ಕಾನೂನುಗಳನ್ನು ರೂಪಿಸುವುದು, ಜಾರಿಗೊಳಿಸುವುದು ಮತ್ತು ವ್ಯಾಖ್ಯಾನಿಸುವ ಅಧಿಕಾರ ಹೊಂದಿರುವ ಸಂಸ್ಥೆಗಳ ಒಂದು ವ್ಯವಸ್ಥೆ. ವಿಸ್ತೃತ ಅರ್ಥದಲ್ಲಿ ಹೇಳುವುದಾದರೆ ದೇಶದ ನಾಗರಿಕರ ಹಾಗೂ ಸಂಪನ್ಮೂಲಗಳ ಮೇಲೆ ಆಡಳಿತವನ್ನು ನಡೆಸುವುದು ಮತ್ತು ನಿಗಾ ವಹಿಸುವುದೇ ಸರ್ಕಾರ.

**ನ್ಯಾಯಾಂಗ:** ನ್ಯಾಯದಾನ ವ್ಯವಸ್ಥೆಯನ್ನು ನಿರ್ವಹಿಸಲು ಹಾಗೂ ಎಲ್ಲಾ ಬಗೆಯ ಕಾನೂನು ವ್ಯಾಜ್ಯಗಳನ್ನು ಪರಿಹರಿಸಲು ಕಾರ್ಯವಿಧಾನವನ್ನು ಒದಗಿಸುವ ಅಧಿಕಾರ ಹೊಂದಿರುವ ಸಂಸ್ಥೆ. ದೇಶದ ಎಲ್ಲ ನ್ಯಾಯಾಲಯಗಳನ್ನು ಸಮಗ್ರವಾಗಿ ನ್ಯಾಯಾಂಗ ಎಂದು ಕರೆಯಲಾಗುತ್ತದೆ.

**ಶಾಸಕಾಂಗ:** ದೇಶದಲ್ಲಿ ಕಾನೂನುಗಳನ್ನು ರೂಪಿಸುವ ಅಧಿಕಾರ ಹೊಂದಿರುವ ಜನಪ್ರತಿನಿಧಿಗಳ ಒಂದು ಶಾಸನ ಸಭೆ. ಕಾನೂನುಗಳನ್ನು ರೂಪಿಸುವುದಲ್ಲದೆ ಶಾಸಕಾಂಗಗಳು ತೆರಿಗೆಗಳನ್ನು ಹೆಚ್ಚಿಸುವ, ಬಜೆಟ್ ಹಾಗೂ ಇನ್ನಿತರ ಹಣಕಾಸು ಮಸೂದೆಗಳನ್ನು ಅಂಗೀಕರಿಸುವ ಕಾರ್ಯಗಳನ್ನೂ ಸಹ ಇದು ಮಾಡುತ್ತದೆ.

**ಕಚೇರಿ ಜ್ಞಾಪನಾ ಪತ್ರ (ಆಫೀಸ್ ಮೆಮೊರಾಂಡಮ್):** ಸರ್ಕಾರದ ನೀತಿ ಅಥವಾ ನಿರ್ಧಾರದ ಬಗ್ಗೆ ಪ್ರಕಟಣೆ ಹೊರಡಿಸುವ ಸೂಕ್ತ ಪ್ರಾಧಿಕಾರ.

**ರಾಜಕೀಯ ಸಂಸ್ಥೆ:** ದೇಶದಲ್ಲಿ ರಾಜಕೀಯ ಜೀವನವನ್ನೂ ಸರ್ಕಾರದ ನಡವಳಿಕೆಯನ್ನೂ ಸೂತ್ರಬದ್ಧಗೊಳಿಸುವ ಕಾರ್ಯವಿಧಾನಗಳ ಕಂತೆ.

**ಮೀಸಲು:** ತಾರತಮ್ಯಕ್ಕೆ ಒಳಗಾದ, ದುರ್ಬಲ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಕೆಲವು ಜನರು ಮತ್ತು ಸಮುದಾಯಗಳಿಗೆ ಸರ್ಕಾರಿ ಹುದ್ದೆಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಕೆಲವು ಸ್ಥಾನಗಳನ್ನು 'ಮೀಸಲಿರಿಸುವ' ನೀತಿ.

**ರಾಜ್ಯ:** ಖಚಿತ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವ, ಸಂಘಟಿತ ಸರ್ಕಾರ ವ್ಯವಸ್ಥೆಯನ್ನು ಹೊಂದಿದ್ದು ದೇಶೀಯ ಹಾಗೂ ವಿದೇಶಿ ನೀತಿಗಳನ್ನು ರೂಪಿಸುವ ಅಧಿಕಾರ ಹೊಂದಿರುವ ರಾಜಕೀಯ ಸಂಘಟನೆ. ಸರ್ಕಾರಗಳು ಬದಲಾಗಬಹುದು, ಆದರೆ ಪ್ರಭುತ್ವ ಮುಂದುವರಿಯುತ್ತದೆ. ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ ದೇಶ, ರಾಷ್ಟ್ರ ಮತ್ತು ಪ್ರಭುತ್ವ ಎಂಬ ಪದಗಳನ್ನು ಸಮನಾರ್ಥಕವಾಗಿ ಬಳಸಲಾಗುತ್ತದೆ.

## ಅಭ್ಯಾಸ

1. **ನೀವು ಭಾರತದ ರಾಷ್ಟ್ರಪತಿಯಾಗಿ ಆಯ್ಕೆಯಾದರೆ ನೀವು ಸ್ವಂತವಾಗಿ ಈ ಕೆಳಗಿನವುಗಳಲ್ಲಿ ಯಾವ ನಿರ್ಧಾರಗಳನ್ನು ಕೈಗೊಳ್ಳಬಹುದು?**

   a. ನಿಮಗೆ ಇಷ್ಟವಾದವರನ್ನು ನೀವು ಪ್ರಧಾನಮಂತ್ರಿಯನ್ನಾಗಿ ಆಯ್ಕೆ ಮಾಡುವುದು.
   b. ಲೋಕಸಭೆಯಲ್ಲಿ ಬಹುಮತ ಹೊಂದಿರುವ ಪ್ರಧಾನಮಂತ್ರಿಯನ್ನು ವಜಾಗೊಳಿಸುವುದು.
   c. ಎರಡೂ ಸದನಗಳು ಅನುಮೋದಿಸಿರುವ ಮಸೂದೆಯನ್ನು ಮರು ಪರಿಶೀಲಿಸಿ ಎಂದು ಕೇಳುವುದು.
   d. ಸಚಿವ ಮಂಡಳಿಯ ಸದಸ್ಯರನ್ನಾಗಿ ನಿಮ್ಮ ಆಯ್ಕೆಯ ನಾಯಕರನ್ನು ನೇಮಕ ಮಾಡುವುದು.

2. **ಈ ಕೆಳಗಿನವರಲ್ಲಿ ಯಾರು ರಾಜಕೀಯ ಕಾರ್ಯಾಂಗದ ಭಾಗವಾಗಿದ್ದಾರೆ?**

   a. ಜಿಲ್ಲಾ ಕಲೆಕ್ಟರ್ (ಜಿಲ್ಲಾಧಿಕಾರಿ)
   b. ಗೃಹ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ
   c. ಗೃಹ ಸಚಿವರು

d. ರಾಜ್ಯ ಪೊಲೀಸ್ ಮಹಾನಿರ್ದೇಶಕರು

**3. ನ್ಯಾಯಾಂಗದ ಬಗೆಗಿನ ಈ ಕೆಳಗಿನ ಯಾವ ಹೇಳಿಕೆ ತಪ್ಪು?**

a. ಸಂಸತ್ ಅನುಮೋದಿಸುವ ಪ್ರತಿಯೊಂದು ಕಾನೂನನ್ನೂ ಸುಪ್ರೀಂಕೋರ್ಟ್ ಅನುಮೋದಿಸುವುದು ಅಗತ್ಯ.

b. ಸಂವಿಧಾನದ ಮೂಲತತ್ವಕ್ಕೆ ವಿರುದ್ಧವಾದ ಕಾನೂನುಗಳನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಬಹುದು.

c. ನ್ಯಾಯಾಂಗವು, ಕಾರ್ಯಾಂಗದಿಂದ ಸ್ವತಂತ್ರವಾದುದು.

d.ಯಾವ ಪ್ರಜೆಯಾದರೂ ತನ್ನ ಹಕ್ಕುಗಳ ಉಲ್ಲಂಘನೆಯಾದರೆ ಆಕೆ ನ್ಯಾಯಾಂಗದ ಮೊರೆ ಹೋಗಬಹುದು.

**4. ಈ ಕೆಳಗಿನ ಯಾವ ಸಂಸ್ಥೆ ದೇಶದಲ್ಲಿ ಹಾಲಿ ಇರುವ ಕಾನೂನುಗಳನ್ನು ಬದಲಾಯಿಸಬಹುದು.**

a. ಸುಪ್ರೀಂಕೋರ್ಟ್

b. ರಾಷ್ಟ್ರಪತಿ

c. ಪ್ರಧಾನಮಂತ್ರಿ

d. ಸಂಸತ್

**5. ಸಚಿವಾಲಯವನ್ನು ಅದು ಬಿಡುಗಡೆ ಮಾಡಿರಬಹುದಾದ ಸುದ್ದಿಯೊಡನೆ ಹೊಂದಿಸಿ**

| | |
|---|---|
| a. ದೇಶದಿಂದ ಸೆಣಬು ರಫ್ತು ಹೆಚ್ಚಳ ಮಾಡುವ ಕುರಿತು ಹೊಸ ನೀತಿ ರೂಪಿಸಲಾಗುತ್ತಿದೆ | I. ರಕ್ಷಣಾ ಸಚಿವಾಲಯ |
| b. ಗ್ರಾಮೀಣ ಭಾಗದಲ್ಲಿ ದೂರವಾಣಿ ಸೇವೆಗಳನ್ನು ಹೆಚ್ಚು ಲಭ್ಯವಾಗುವಂತೆ ಮಾಡಲಾಗುವುದು. | II. ಕೃಷಿ, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ |
| c. ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯಲ್ಲಿ ಮಾರಾಟ ಮಾಡುವ ಅಕ್ಕಿ ಹಾಗೂ ಗೋಧಿ ಬೆಲೆ ಮತ್ತಷ್ಟು ಇಳಿಕೆ | III. ಆರೋಗ್ಯ ಸಚಿವಾಲಯ |
| d. ಪಲ್ಸ್ ಪೋಲಿಯೊ ಅಭಿಯಾನ ಆರಂಭಗೊಳ್ಳಲಿದೆ | IV. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ |
| e. ಮುಂಚೂಣಿ ಪ್ರದೇಶಗಳಿಗೆ ನಿಯೋಜಿಸಿರುವ ಯೋಧರ ಭತ್ಯೆಗಳನ್ನು ಹೆಚ್ಚಿಸಲಾಗುವುದು | V. ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ |

**6. ಈ ಅಧ್ಯಾಯದಲ್ಲಿ ನಾವು ಓದಿರುವ ಎಲ್ಲಾ ಸಂಸ್ಥೆಗಳ ಪೈಕಿ ಯಾವುದು ಈ ಕೆಳಗಿನ ವಿಷಯಗಳಲ್ಲಿ ಅಧಿಕಾರ ಚಲಾಯಿಸುತ್ತದೆ ಎಂದು ಗುರುತಿಸಿ.**

a. ರಸ್ತೆ, ನೀರಾವರಿ ಮತ್ತಿತರ ಮೂಲಸೌಕರ್ಯ ಅಭಿವೃದ್ಧಿಗೆ ಮತ್ತು ನಾಗರಿಕರ ಕಲ್ಯಾಣಕ್ಕಾಗಿ ಭಿನ್ನಕಲ್ಯಾಣ ಚಟುವಟಿಕೆಗಳನ್ನು ಕೈಗೊಳ್ಳಲು ಹಣವನ್ನು ಹಂಚಿಕೆ ಮಾಡುವ ನಿರ್ಧಾರ ಕೈಗೊಳ್ಳುವುದು.

b. ಷೇರು ಮಾರುಕಟ್ಟೆ ನಿಯಂತ್ರಣಕ್ಕೆ ಸಮಿತಿ ಶಿಫಾರಸ್ಸು ಮಾಡಿರುವ ಕಾನೂನಿನ ಬಗ್ಗೆ ಪರಿಶೀಲನೆ.

c. ಎರಡು ರಾಜ್ಯ ಸರ್ಕಾರಗಳ ನಡುವಿನ ಕಾನೂನು ವ್ಯಾಜ್ಯವನ್ನು ಇತ್ಯರ್ಥಪಡಿಸುವುದು.

d. ಭೂಕಂಪದ ಸಂತ್ರಸ್ತರಿಗೆ ಪರಿಹಾರ ನೀಡುವ ನಿರ್ಧಾರವನ್ನು ಜಾರಿಗೊಳಿಸುವುದು.

**7. ಭಾರತದ ಪ್ರಧಾನಮಂತ್ರಿಯನ್ನು ಏಕೆ ಜನರು ನೇರವಾಗಿ ಆಯ್ಕೆ ಮಾಡುವುದಿಲ್ಲ? ಅತ್ಯಂತ ಸೂಕ್ತ ಉತ್ತರವನ್ನು ಆಯ್ಕೆ ಮಾಡಿ ಮತ್ತು ನಿಮ್ಮ ಆಯ್ಕೆಗಳಿಗೆ ಕಾರಣವನ್ನು ನೀಡಿ.**

a. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲೋಕಸಭೆಯಲ್ಲಿ ಬಹುಮತ ಹೊಂದಿರುವ ಪಕ್ಷದ ನಾಯಕ ಮಾತ್ರ ಪ್ರಧಾನಮಂತ್ರಿಯಾಗಬಹುದು.

b. ಅವಧಿಗೆ ಮುನ್ನವೇ ಲೋಕಸಭೆಯು ಪ್ರಧಾನಮಂತ್ರಿ ಮತ್ತು ಸಚಿವ ಮಂಡಳಿಯ ಸದಸ್ಯರನ್ನು ವಜಾಗೊಳಿಸಬಹುದು.

c. ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳನ್ನು ನೇಮಕ ಮಾಡಿರುವುದರಿಂದ ಅದರ ಅಗತ್ಯವಿಲ್ಲ ಎನಿಸುತ್ತದೆ.

d. ಪ್ರಧಾನಮಂತ್ರಿಗಳಿಗೆ ನೇರ ಚುನಾವಣೆ ನಡೆದರೆ, ಆ ಚುನಾವಣೆಗೆ ಹೆಚ್ಚಿನ ಹಣ ಬೇಕಾಗುತ್ತದೆ.

**8**. ನಾಯಕನೊಬ್ಬ ಒಂದು ದಿನಕ್ಕೆ ಮುಖ್ಯಮಂತ್ರಿಯಾಗಿ ಆ ರಾಜ್ಯದಲ್ಲಿ ಭಾರೀ ಬದಲಾವಣೆಗಳನ್ನು ಮಾಡಿದ ಚಲನಚಿತ್ರವನ್ನು ವೀಕ್ಷಿಸಲು ಮೂವರು ಸ್ನೇಹಿತರು ಹೋಗಿದ್ದರು. ಇಂತಹರು ದೇಶಕ್ಕೆ ಬೇಕಾಗಿದ್ದಾರೆ ಎಂದು ಇಮ್ರಾನ್ ಹೇಳಿದ. ಯಾವುದೇ ಸಂಸ್ಥೆಗಳ ಸಹಾಯವಿಲ್ಲದೆ ಇಂತಹ ವ್ಯಕ್ತಿಗಳು ಆಡಳಿತ ನಡೆಸುವುದು ಅಪಾಯಕಾರಿ ಎಂದು ರಿಜ್ವಾನ್ ಹೇಳಿದ. ಶಂಕರ್, ಇದೆಲ್ಲ ಕೇವಲ ಭ್ರಮೆ, ಯಾವ ಸಚಿವರು ಒಂದು ದಿನದಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದ. ಅಂತಹ ಚಲನಚಿತ್ರದ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ?

**9**. ಓರ್ವ ಶಿಕ್ಷಕರು ಅಣಕು ಸಂಸತ್ ಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಅವರು ಇಬ್ಬರು ವಿದ್ಯಾರ್ಥಿಗಳನ್ನು ಕರೆದು, ನೀವಿಬ್ಬರು ಎರಡು ರಾಜಕೀಯ ಪಕ್ಷಗಳ ನಾಯಕರಾಗಿ ನಟಿಸಿ ಎಂದು ಹೇಳಿದರು. ಶಿಕ್ಷಕರು ಅವರಿಗೆ ಎರಡು ಆಯ್ಕೆಗಳನ್ನು ಕೊಟ್ಟು ಇವುಗಳಲ್ಲಿ ಯಾವುದೇ ಒಂದನ್ನು ಆರಿಸಿಕೊಳ್ಳಿ ಎಂದರು: ಅಣಕು ಲೋಕಸಭಾ ಅಥವಾ ಅಣಕು ರಾಜ್ಯಸಭೆಯಲ್ಲಿ ಬಹುಮತ ಹೊಂದಿರುವ ಪಕ್ಷ. ಈ ಆಯ್ಕೆಯನ್ನು ನಿಮಗೆ ನೀಡಿದರೆ ನೀವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೀರಿ ಮತ್ತು ಏಕೆ ಮಾಡಿಕೊಳ್ಳುತ್ತೀರಿ?

**10. ಮೀಸಲು ಆದೇಶದ ಉದಾಹರಣೆಯನ್ನು ಓದಿದ ಬಳಿಕ ಮೂವರು ವಿದ್ಯಾರ್ಥಿಗಳು ನ್ಯಾಯಾಂಗದ ಪಾತ್ರದ ಬಗ್ಗೆ ಭಿನ್ನ ಪ್ರತಿಕ್ರಿಯೆಗಳನ್ನು ನೀಡಿದರು. ನಿಮ್ಮ ಪ್ರಕಾರ ನ್ಯಾಯಾಂಗದ ಪಾತ್ರದ ಬಗ್ಗೆ ಯಾರ ಅಭಿಪ್ರಾಯ ಸರಿಯಾಗಿದೆ?**

a. ಸುಪ್ರೀಂಕೋರ್ಟ್ ಸರ್ಕಾರದ ನಿರ್ಧಾರವನ್ನು ಒಪ್ಪಿರುವುದರಿಂದ ಅದು ಸ್ವತಂತ್ರವಲ್ಲ ಎಂದು ಶ್ರೀನಿವಾಸ್ ವಾದಿಸಿದನು.

b. ನ್ಯಾಯಾಂಗ ಸ್ವತಂತ್ರವಾದುದು, ಏಕೆಂದರೆ ಅದು ಸರ್ಕಾರದ ಆದೇಶಗಳ ವಿರುದ್ಧವೂ ತೀರ್ಪು ನೀಡಬಹುದಿತ್ತು. ಪ್ರಸಕ್ತ ಆದೇಶವನ್ನು ಮಾರ್ಪಡಿಸುವಂತೆ ಸುಪ್ರೀಂಕೋರ್ಟ್ ಸರ್ಕಾರಕ್ಕೆ ಆದೇಶ ನೀಡಿದೆ ಎಂದು ಅಂಜಯ್ಯ ಹೇಳಿದ.

c. ನ್ಯಾಯಾಂಗ ಸ್ವತಂತ್ರವೂ ಅಲ್ಲ ಅಥವಾ ಯಥಾಸ್ಥಿತಿವಾದಿಯೂ ಅಲ್ಲ, ಬದಲಿಗೆ ವಿರುದ್ಧ ಪಕ್ಷಗಳ ನಡುವೆ ಸಂಧಾನಕಾರನಾಗಿ ಕೆಲಸ ಮಾಡುತ್ತದೆ. ಈ ಆದೇಶವನ್ನು ಬೆಂಬಲಿಸುವವರ ಹಾಗೂ ವಿರೋಧಿಸುವವರ ನಡುವೆ ನ್ಯಾಯಾಲಯ ಒಳ್ಳೆಯ ಸಮತೋಲನ ಕಾಯ್ದುಕೊಂಡಿದೆ ಎಂದು ವಿಜಯಳ ಅಭಿಪ್ರಾಯ.

## ದಿನಪತ್ರಿಕೆಗಳನ್ನು ಓದೋಣ

**ಒಂದು ವಾರದ ದಿನಪತ್ರಿಕೆಗಳನ್ನು ಸಂಗ್ರಹಿಸಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿರುವ ಸಂಸ್ಥೆಗಳ ನಿರ್ವಹಣೆಗೆ ಸಂಬಂಧಿಸಿದ ಸುದ್ದಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ.**

- **ಶಾಸಕಾಂಗದ** ಕಾರ್ಯವೈಖರಿ
- **ರಾಜಕೀಯ ಕಾರ್ಯಾಂಗದ** ಕಾರ್ಯಶೈಲಿ
- **ನಾಗರಿಕ ಸೇವೆಗಳ** ಕಾರ್ಯವೈಖರಿ
- **ನ್ಯಾಯಾಂಗದ** ಕಾರ್ಯಶೈಲಿ

**ಅನುವಾದ:**

**ಪರಿಶೀಲನೆ:**